ಕರ್ನಾಟಕ ಸರ್ಕಾರ

ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಮಂಡ್ಯ ಜಿಲ್ಲೆ

## ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಪಾಂಡವಪುರ

## ಸ.ಪ.ಪೂ.ಕಾಲೇಜು (ಪ್ರೌಢಶಾಲಾ ವಿಭಾಗ) ಪಾಂಡವಪುರ, ಪಾಂಡವಪುರ ತಾಲ್ಲೂಕ

## 2022-23

## ಹತ್ತನೇತರಗತಿ

## ಪ್ರಥಮ ಭಾಷೆ ಕನ್ನಡ

# ಪ್ರಗತಿ ಸ್ನೇಹಿ

ಕಿರುಹೊತ್ತಿಗೆ ಪರಿಕಲ್ಪನೆ

ಶ್ರೀ ಜಯರಾಮು ಕ್ಯಾತನಹಳ್ಳಿ

ಕರ್ನಾಟಕ ಸರ್ಕಾರ
ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಮಂಡ್ಯ ಜಿಲ್ಲೆ

## ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಪಾಂಡವಪುರ

**ಸ.ಪ.ಪೂ.ಕಾಲೇಜು(ಪ್ರೌಢಶಾಲಾ ವಿಭಾಗ) ಪಾಂಡವಪುರ, ಪಾಂಡವಪುರ ತಾಲ್ಲೂಕು**

ಹತ್ತನೇತರಗತಿ

## ಪ್ರಥಮ ಭಾಷೆ ಕನ್ನಡ

# ಪ್ರಗತಿ ಸ್ನೇಹಿ

| ಮಾರ್ಗದರ್ಶನ | | ಸಲಹೆ ಮತ್ತು ಸಹಕಾರ | |
|---|---|---|---|
| ಶ್ರೀ ಜಿ.ಎ ಲೋಕೇಶ್‌ರವರು<br>ಕ್ಷೇತ್ರ ಶಿಕ್ಷಣಾಧಿಕಾರಿಗಳು<br>ಪಾಂಡವಪುರ ತಾಲ್ಲೂಕು | ಶ್ರೀ ನಾಗೇಂದ್ರಮೂರ್ತಿರವರು<br>ಕನ್ನಡ ವಿಷಯ ಪರಿವೀಕ್ಷಕರು<br>ಉಪನಿರ್ದೇಶಕರ ಕಛೇರಿ, ಮಂಡ್ಯ | ಶ್ರೀ ಎನ್ ಮಹದೇವಪ್ಪನವರು<br>ಉಪ ಪ್ರಾಂಶುಪಾಲರು<br>ಪ್ರೌಢಶಾಲಾ ವಿಭಾಗ (ಸ.ಪ.ಪೂ.ಕಾ) ಪಾಂಡವಪುರ | ಶ್ರೀ ಆರ್.ಸಿ ನಾಗೇಗೌಡರವರು<br>ಗಣಿತ ವಿಷಯ ಶಿಕ್ಷಕರು<br>ಪ್ರೌಢಶಾಲಾವಿಭಾಗ (ಸ.ಪ.ಪೂ.ಕಾ) ಪಾಂಡವಪುರ |

**ಕಿರುಹೊತ್ತಿಗೆ ಸಿದ್ಧತೆ**

ಶ್ರೀ ಜಯರಾಮು ಕ್ಯಾತನಹಳ್ಳಿ
ಕನ್ನಡ ಭಾಷಾ ಶಿಕ್ಷಕರು
ಪ್ರೌಢಶಾಲಾವಿಭಾಗ (ಸ.ಪ.ಪೂ.ಕಾ) ಪಾಂಡವಪುರ

## ಪಾಠ–1 ಶಬರಿ

ಲೇಖಕರ ಪರಿಚಯ : ಪು.ತಿ. ನರಸಿಂಹಾಚಾರ್

ಪು.ತಿ.ನರವರು 1905ರಲ್ಲಿ ಮಂಡ್ಯದ ಮೇಲುಕೋಟೆಯಲ್ಲಿ ಜನಿಸಿದರು. ಅಹಲ್ಯೆ, ಶಬರಿ, ಹಣತೆ ಇವರ ಕೃತಿಗಳು. ಇವರಿಗೆ ಪಂಪ ಪ್ರಶಸ್ತಿ ಬಂದಿದೆ.

(ಅ).ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

1. ಶ್ರೀರಾಮನ ತಂದೆಯ ಹೆಸರೇನು?
ದಶರಥ

2. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
ಹೂವು, ಜೇನು, ಹಣ್ಣುಹಂಪಲು

3. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
ಶಬರಿ

4. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?
ದನು

(ಆ). ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

1. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?
ಗಿರಿ ವನಗಳೇ ನಾನು ನಿಮ್ಮನ್ನು ಬೇಡಿಕೊಳ್ಳುವೆನು. ಸೀತೆ ದೊರೆಯುವಳೆ? ಅವಳಿರುವ ನೆಲೆಯನ್ನು ತಿಳಿಸುವಿರಾ ಎಂದನು.

2. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?
ತಾಳಿಕೋ ಅಣ್ಣ ಸೂರ್ಯನೇ ಕಾಂತಿಗೆಡಲು, ರಾಮನೇ ಧೈರ್ಯಗೆಡಲು ಲೋಕಕ್ಕೆ ಧೈರ್ಯ ನೀಡುವವರು ಯಾರು ಎಂದನು.

3. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು? ಅಥವಾ

4. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.
ಹೂವು, ಹಣ್ಣು, ಜೇನನ್ನು ತಂದು ತಿನ್ನಲು ಕೊಟ್ಟಳು. ಬಾಡಿದ ಹೂಗಳ ಜಾಗಕ್ಕೆ ಹೊಸತನ್ನು ಇಟ್ಟಳು. ಬಳಿಕ ರಾಮನ ಪಾದಕ್ಕೆ ನಮಸ್ಕರಿಸಿ ಮಾಲೆಯನ್ನು ಕೊರಳಿಗೆ ಹಾಕಿದಳು.

5. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು?
ನಿನ್ನ ಉಪಚಾರದಿಂದ ಕಾಡಿನಲ್ಲಿದ್ದರೂ ಸ್ವರ್ಗದ ಅನುಭವವಾಗಿದೆ. ನಿನ್ನನ್ನು ತಾಯಿ ಎಂದು ಭಾವಿಸಿದ್ದೇವೆ.

(ಇ). ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :

1. "ಆವುದೀ ಮರುಳು? ನಮ್ಮೆಡೆಗೆ ಬರುತಿಹುದು"
2. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ"
3. "ತಾಯಿ, ದಾರಿಗರಿಗೆ ಬೇಡಿಲ್ಲ ದೊರೆಯುವುದೇ?
4. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ!"
5. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು"

ಆಯ್ಕೆ :– ಈ ಸಾಲನ್ನು ಪುತಿನ ರವರ "ಶಬರಿ " ಪಾಠದಿಂದ ಆರಿಸಿದೆ.
ಸಂದರ್ಭ :–ಸೀತೆ ಹುಡುಕುತ್ತಾ, ಆಶ್ರಮಕ್ಕೆ ಬಂದ ರಾಮಲಕ್ಷ್ಮಣರು ಮಾತನಾಡುತ್ತ, ಶಬರಿಯೊಂದಿಗೆಹೇಳಿದ ಸಂದರ್ಭ.
ಸ್ವಾರಸ್ಯ :– ಶಬರಿಯ ಭಕ್ತಿ, ರಾಮನ ಸರಳತೆ ಇಲ್ಲಿ ಸ್ವಾರಸ್ಯಕರವಾಗಿ ಮೂಡಿ ಬಂದಿದೆ.

## ಪಾಠ–2 ಲಂಡನ್‌ನಗರ

ಲೇಖಕರ ಪರಿಚಯ : ವಿ.ಕೃ.ಗೋಕಾಕ್

ಡಿ.ಎಸ್.ಜಯಪ್ಪಗೌಡರವರು 1947ರಲ್ಲಿ ದಾರದಹಳ್ಳಿಯಲ್ಲಿ ಜನಿಸಿದರು. ಮೈಸೂರು ಒಡೆಯರು, ಜನಪದ ಆಟಗಳು ಇವರ ಕೃತಿಗಳು. ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ.

(ಅ).ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

1. ರಾಹಿಲನು ಯಾರು ?
ಸೇನಾ ಡಾಕ್ಟರ್.

2. ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು ?
ಶಸ್ತ್ರ ಚಿಕಿತ್ಸಾ ಪೆಟ್ಟಿಗೆ

3. ಗಡಿ ಪ್ರದೇಶಗಳಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ ?
ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು

4. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು?
ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ. ಸಂಕಷ್ಟಕ್ಕೆ ಒಳಗಾದವರ ಕಡೆಯವನು

5. ಯುದ್ಧದ ಬಗೆಗೆ ಮುದುಕಿಯು ಏನೆಂದು ಗೊಣಗಿಕೊಂಡು ಬಾಗಿಲು ತೆರೆದಳು ?
ದೇಹಕ್ಕೂ, ಮನಸ್ಸಿಗೂ ಗಾಯ ಮಾಡುವುದೇ ಯುದ್ಧದ ಪರಿ ತಾನೇ?

(ಆ). ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

1. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು?
ಡಾಕ್ಟರ್! ರೇಡಿಯೋ ಸಮನಾಗಿ ಕಾರ್ಯನಿರ್ವಹಿಸುತ್ತಿಲ್ಲ. ಕೆಳಗೆ ಇಳಿಯೋಣವೆಂದರೆ ಈ ಕತ್ತಲೆಯಲ್ಲಿ ಏನೂ ಕಾಣುತ್ತಿಲ್ಲವಲ್ಲ ಎಂದನು

2. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?
ಆ ಮಹಿಳೆ ಮನೆಯೊಳಗೆ ಯಾವ ಅಪಾಯದಲ್ಲಿ ಸಿಲುಕಿದ್ದಾಳೆ ನಾನೀಗ ಕದವನ್ನು ತಟ್ಟಿದರೆ ಏನಾಗಬಹುದು.

3. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?ಅಥವಾ

4. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು?
ಯುದ್ಧ ಇಲ್ಲದಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿಕೊಳ್ಳುತ್ತಿದ್ದೆವಲ್ಲ ದೇವರೇ? ಈ ಮನುಷ್ಯರಿಗೆ ಎಂತಹ ಬುದ್ಧಿ ಕೊಟ್ಟಿದ್ದಿ ಎಂದಳು. '

(ಇ). ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :

1. "ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ?"
2. "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ."
3. "ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ
4. "ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!"

ಆಯ್ಕೆ :– ಈ ಸಾಲನ್ನು ಸಾರಾ ಅಬೂಬಕ್ಕರ್‌ರವರ "ಯುದ್ಧ " ಪಾಠದಿಂದ ಆರಿಸಿದೆ.
ಸಂದರ್ಭ:– ರಾಹಿಲ ಮತ್ತು ಮುದುಕಿ ಪರಸ್ಪರ ಸಹಾಯ ಮಾಡಿಕೊಂಡ ಸಂದರ್ಭದಲ್ಲಿ ಈ ಮಾತು ಬಂದಿದೆ.
ಸ್ವಾರಸ್ಯ:– ಯುದ್ಧದಲ್ಲಿ ನೊಂದವರ ಮಾನವೀಯ ಗುಣಗಳು ಇಲ್ಲಿಸ್ವಾರಸ್ಯಕರವಾಗಿಮೂಡಿಬಂದಿದೆ.

## ಪಾಠ–3 ಶುಕನಾಶನ ಉಪದೇಶ

### ಕೃತಿಕಾರರ ಪರಿಚಯ

### ಡಾ.ಬನ್ನಂಜೆ ಗೋವಿಂದಾಚಾರ್ಯ

ಡಾ.ಬನ್ನಂಜೆ ಗೋವಿಂದಾಚಾರ್ಯರು 1936ರ ಆಗಸ್ಟ್ 3ರಂದು ಉಡುಪಿಯಲ್ಲಿ ಜನಿಸಿದರು. ಇವರು ಕಾದಂಬರಿ, ಮುಗಿಲ ಮಾತು, ಹೇಳದೆ ಉಳಿದದ್ದು, ಮತ್ತೆ ರಾಮನ ಕತೆ, ಮಹಾಶ್ವೇತೆ ಇವರ ಕೃತಿಗಳು ಇವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿಗಳು ಬಂದಿವೆ.

### ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಹಿತವಚನವು ಮನಸ್ಸಿನ ಕೊಳೆಯನ್ನು ಹೇಗೆ ತೊಳೆಯುತ್ತದೆ?
   ಮುಸ್ಸಂಜೆಯ ಚಂದ್ರ ಕತ್ತಲನ್ನು ಕಳೆವಂತೆ ತೊಳೆಯುತ್ತದೆ.
2. ಯಾರ ಕಿವಿಗೆ ಉಪದೇಶ ನಾಟುವುದಿಲ್ಲ?
   ರಾಜರ ಮನೆತನದಲ್ಲಿ ಹುಟ್ಟಿದವರ ಕಿವಿಗೆ
3. ಯಾರಿಗೆ ಜಗತ್ತು ಕ್ಷುದ್ರವಾಗಿ ಕಾಣುತ್ತದೆ?
   ದುಡ್ಡಿನ ಪೈತ್ಯ ಅಡರಿದವರಿಗೆ
4. ಲಕ್ಷ್ಮಿ ಯಾವ ಯಾವ ದುರ್ಗುಣಗಳನ್ನು ಹೊತ್ತು ಬಂದಿದ್ದಾಳೆ?
   ಮದ್ಯದ ಮಾದಕತ್ವ, ದುರ್ಗುಣಗಳನ್ನು ಹೊತ್ತು ಬಂದಿದ್ದಾಳೆ.
5. ಸಂಪತ್ತಿನ ಗುಣವೇನು?
   ಗಂಧರ್ವ ನಗರದಂತೆ ಕರಗಿಬಿಡುವುದು
6. ಯಾರ್‍ಯಾರನ್ನು ಕಂಡರೆ ಸಂಪತ್ತಿಗೆ ಆಗಿಬರುವುದಿಲ್ಲ?
   ವಿದ್ಯಾವಂತರು, ಗುಣವಂತರು, ವೀರರು, ಸಜ್ಜನರು , ಶೂರರು, ದಾನಶೀಲರನ್ನು ಕಂಡರೆ
7. ದರ್ಭೆಯ ಚಿಗುರು ಯಾವ ಗುಣವನ್ನು ಒರೆಸಿಬಿಡುತ್ತದೆ?
   ರಾಜರ ಕ್ಷಮಾಗುಣವನ್ನು ಒರೆಸಿಬಿಡುತ್ತದೆ.
8. ಬೆಳ್ಗೊಡೆಯ ಅಡಿಯಲ್ಲಿ ಯಾವುದು ಕಾಣುವುದಿಲ್ಲ?
   ಪರಲೋಕ ಕಾಣುವುದಿಲ್ಲ.

### ಆ) ಕೆಳಗಿನ ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿರಿ.

1. ಗುರೂಪದೇಶದ ಗುಣಗಳನ್ನು ಪಟ್ಟಿಮಾಡಿ.

ಗುರೂಪದೇಶ ಎಂದರೆ ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ ಸ್ನಾನ. ತಲೆ ನೆರೆಯದೆ, ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು; ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ; ಪಂಜು ಇಲ್ಲದೆ ಬೆಳಗುವ ಬೆಳಕು.

2. ಗುರೂಪದೇಶವು ಯಾರಿಗೆ ಮೆಚ್ಚಿಕೆಯಾಗುವುದಿಲ್ಲ? ಯಾಕೆ ?

ಮೂರ್ಖರು ಮತ್ತು ರಾಜಮನೆತನದಲ್ಲಿ ಹುಟ್ಟಿದವರಿಗೆ ಗುರೂಪದೇಶವು ಮೆಚ್ಚಿಕೆಯಾಗುವುದಿಲ್ಲ. ಏಕೆಂದರೆ ಮೂರ್ಖನ ಕಿವಿಗೆ ಅದು ಒಂದು ಹೊರೆ. ಅಂಥವರ ಕಿವಿಯೊಳಗೆ ಹಿತವಚನ ಹೊಕ್ಕಾಗ ತಿಳಿನೀರು ಹೊಕ್ಕಂತೆ ಸಂಕಟಪಟ್ಟುಕೊಳ್ಳುತ್ತಾರೆ.

3. ರಾಜರ ಪ್ರಕೃತಿ ಹೇಗಿರುತ್ತದೆ?

ಸಂಪತ್ತಿನ ಪೈತ್ಯ ಅಡರಿ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ. ಅಧಿಕಾರದ ಸೋಂಕು ತಾಗಿ ಬುದ್ಧಿ ಮಂಕಾಗಿ ಬಿಡುತ್ತದೆ. ಅಹಂಕಾರದಿಂದ ಅವರ ಕಿವಿ ಕಿವುಡಾಗಿಬಿಡುತ್ತದೆ.

4. ಸಂಪತ್ತನ್ನು ಕಾಪಾಡಲು ಎದುರಾಗುವ ಕಷ್ಟಗಳೇನು?

ಸೈನಿಕರ ಕತ್ತಿಗಳ ಕಾವಲಿದ್ದರೂ ಸಂಪತ್ತು ಕಣ್ಮರೆಯಾಗಿಬಿಡುತ್ತದೆ. ಮದ್ದಾನೆಗಳ ಕಾವಲಿನಲ್ಲಿ ಕೂಡ ಕಣ್ಣು ತಪ್ಪಿಸಿ ಓಡಿಬಿಡುತ್ತದೆ! ಒಂದೇ ಮನೆಯಲ್ಲಿ ಬಹುಕಾಲ ಉಳಿಯುವ ಅಭ್ಯಾಸ ಇಲ್ಲವೇ ಇಲ್ಲ.

5. ಸಂಪತ್ತು ಯಾರನ್ನು ಆಶ್ರಯಿಸುತ್ತದೆ?

ಸಂಪತ್ತು ಒಳ್ಳೆಯ ಲಕ್ಷಣವಂತನನ್ನೆ ಆಶ್ರಯಿಸುತ್ತದೆ ಎಂಬ ನಿಯಮವಿಲ್ಲ. ಹರಿಯ ಎದೆಯಲ್ಲಿ ಸಿರಿಯ ವಾಸ ಎನ್ನುತ್ತಾರೆ. ಆದರೆ ಮೂರ್ಖರ ಎದೆಯಲ್ಲಿ ಅದರ ವಾಸ ಎನ್ನುವುದು ನಮಗೆ ತಿಳಿದ ಮಾತು.

6. ದುಡ್ಡಿನ ನಿಜರೂಪವೇನು?

ಇದು ಆಸೆಯ ವಿಷಲತೆಗೆ ಎರೆಯುವ ನೀರು. ಇಂದ್ರಿಯಗಳೆಂಬ ಜಿಂಕೆಗಳನ್ನು ಮರುಳುಗೊಳಿಸುವ ಬೇಡನ ಸಂಗೀತ. ಒಳ್ಳೆಯ ನಡತೆಯೆಂಬ ಚಿತ್ರಕ್ಕೆ ಬಳಿದ ಮಸಿ. ಕೋಪವೆಂಬ ಮೊಸಳೆಯನ್ನು ಹೊತ್ತ ಹೊಳೆ.

7. ಸಿರಿಯು ರಾಜನಿಗೆ ಒಲಿದರೆ ಏನೇನು ಅನಾಹುತಗಳಾಗುತ್ತವೆ?

ಸಿರಿಯು ರಾಜರಿಗೆ ಒಲಿದರೆ, ಏನು ಸಂಭ್ರಮ, ಏನು ಕೋಲಾಹಲ! ಜಗತ್ತಿನ ಎಲ್ಲ ದೌರ್ಜನ್ಯಗಳಿಗೆ ಅವರು ಆಸರೆಯಾಗುತ್ತಾರೆ. ಅವರಲ್ಲಿ ದಯೆ–ದಾಕ್ಷಿಣ್ಯಗಳೆಲ್ಲ ದೂರವಾಗಿಬಿಡುತ್ತವೆ. ಮುಪ್ಪಿನ ನೆನಪು ಮರೆಯಾಗುತ್ತದೆ. ಪರಲೋಕ ಕಾಣಿಸುವುದಿಲ್ಲ. ಹೀಗೆ ಅನೇಕ ಅನಾಹುತಗಳಾಗುತ್ತವೆ.

### ಈ) ಈ ಮಾತುಗಳ ಸಂದರ್ಭದೊಡನೆ ಸ್ವಾರಸ್ಯವನ್ನು ವಿಸ್ತರಿಸಿ ಬರೆಯಿರಿ.

1. "ಗುರೂಪದೇಶ ಎಂದರೆ ತಲೆ ನೆರೆಯದೆ ಬರುವ ಮುಪ್ಪು."
2. "ದುಡ್ಡು ದುರಭಿಮಾನದ ತವರು."
3. "ಸಂಪತ್ತು ಸಿಕ್ಕಿತು ಎಂದ ಮಾತ್ರಕ್ಕೆಯೆ ಸುಖವುಂಟೆ?"
4. "ದುಡ್ಡಿನಿಂದ ದೊಡ್ಡವರು ಎನಿಸಿಕೊಂಡವರಲ್ಲಿ ಇರುವಷ್ಟು ದೌರ್ಬಲ್ಯ, ಸಣ್ಣತನ ಇನ್ನೊಂದೆಡೆಇರಲಾರದು."

ಆಯ್ಕೆ:– ಈ ವಾಕ್ಯವನ್ನು ಬನ್ನಂಜೆಯವರ 'ಕಾದಂಬರಿ' ಕೃತಿಯ 'ಶುಕನಾಸನ ಉಪದೇಶ' ಪಾಠದಿಂದ ಆರಿಸಿದೆ.

ಸಂದರ್ಭ:– ಶುಕನಾಶನ ಕಥೆಯನ್ನು ಹೇಳುವಾಗ ಬನ್ನಂಜೆಯವರು ಈ ಮಾತನ್ನು ಹೇಳುವ ಸಂದರ್ಭ.

ಸ್ವಾರಸ್ಯ:– ಗುರೂಪದೇಶದ ಮೂಲಕ ಜ್ಞಾನ ಹಾಗೂ ಸಂಪತ್ತಿನ ಮಹತ್ತ್ವವನ್ನು ಅತ್ಯಂತ ಸ್ವಾರಸ್ಯಪೂರ್ಣವಾಗಿ ತಿಳಿಸಲಾಗಿದೆ.

====================================================

## ಪಾಠ–4 ಭಾಗ್ಯಶಿಲ್ಪಿಗಳು

ಲೇಖಕರ ಪರಿಚಯ : ಡಿ.ಎಸ್ ಜಯಪ್ಪಗೌಡ

ಡಿ.ಎಸ್.ಜಯಪ್ಪಗೌಡರವರು 1947ರಲ್ಲಿ ದಾರದಹಳ್ಳಿಯಲ್ಲಿ ಜನಿಸಿದರು. ಮೈಸೂರು ಒಡೆಯರು, ಜನಪದ ಆಟಗಳು ಇವರ ಕೃತಿಗಳು. ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ.

### (ಅ).ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

1. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು?
   1895
2. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾದರು?
   ಮೈಸೂರು ರಾಜ್ಯದ ಅಭಿವೃದ್ಧಿಗೆ

3. ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲ ವಿದ್ಯುತ್ ಯೋಜನೆ ಯಾವುದು?
ಶಿವನಸಮುದ್ರ ಜಲವಿದ್ಯುತ್ ಉತ್ಪಾದನಾ ಕೇಂದ್ರ

4. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು?
'ಸರ್' ಪದವಿ

5. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?
ನಾಲ್ವಡಿ ಕೃಷ್ಣರಾಜ ಒಡೆಯರು

6.ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ ?
ಎಂಜಿನಿಯರ್ಸ್ ದಿನ

(ಆ). ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

1.ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?
1. ಗ್ರಾಮ ನಿರ್ಮಲೀಕರಣ 2. ವೈದ್ಯ ಸಹಾಯ 3. ವಿದ್ಯಾ ಪ್ರಚಾರ
4. ನೀರಿನ ಸೌಕರ್ಯ 5. ಪ್ರಯಾಣ ಸೌಲಭ್ಯ

2. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು?
ಮಾರಿ ಕಣಿವೆ ಮತ್ತು ಕೆ.ಆರ್.ಎಸ್ ಅಣೆಕಟ್ಟು.

3. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?
ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು

4. ನೆಹರೂ ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?
ತಾವು ಕಡಿಮೆ ಮಾತನಾಡಿ ಹೆಚ್ಚು ಕೆಲಸ ಮಾಡಿದ್ದೀರಿ. ಎಲ್ಲರೂ ಇದನ್ನು ಕಲಿಯಬೇಕು.

5. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು?
ಮೈಸೂರು ಬ್ಯಾಂಕ್, ಫೀಡರ್ ಬ್ಯಾಂಕ್ , ಸಹಕಾರಿ ಬ್ಯಾಂಕ್, ಎಲ್ಐಸಿ

(ಇ). ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :

1. "ಸಾಮಾಜಿಕ ಕಾನೂನುಗಳ ಹರಿಕಾರ."
2. "ಮೈಸೂರು ಸಂಸ್ಥಾನಕ್ಕೆ' ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾಯಿತು "

ಆಯ್ಕೆ:– ಈ ಸಾಲನ್ನು ಸಮಿತಿ ರಚನೆಯ "ಭಾಗ್ಯಶಿಲ್ಪಿಗಳು" ಪಾಠದಿಂದ ಆರಿಸಿದೆ.

ಸಂದರ್ಭ:–ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ರಾಜ್ಯಕ್ಕಾಗಿ ಸಲ್ಲಿಸಿದ ಸೇವೆಯನ್ನು ವಿವರಿಸುವಾಗ ಈ ಮಾತು ಬಂದಿದೆ.

ಸ್ವಾರಸ್ಯ : ಮೈಸೂರು ರಾಜ್ಯಕ್ಕಾಗಿ ಸಲ್ಲಿಸಿದ ಸೇವೆ ಇಲ್ಲಿ ಸ್ವಾರಸ್ಯಕರವಾಗಿ ಮೂಡಿದ ಬಂದಿದೆ. .

3."ತಾವು ಕಡಿಮೆ ಮಾತನಾಡಿದ್ದೀರಿ ; ಹೆಚ್ಚು ಕೆಲಸ ಮಾಡಿದ್ದೀರಿ "
4. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು."

ಆಯ್ಕೆ:– ಈ ಸಾಲನ್ನು ಜಯಪ್ಪಗೌಡರ "ಭಾಗ್ಯಶಿಲ್ಪಿಗಳು" ಪಾಠದಿಂದ ಆರಿಸಿದೆ.

ಸಂದರ್ಭ: ವಿಶ್ವೇಶ್ವರಯ್ಯನವರು ಮೈಸೂರು ರಾಜ್ಯಕ್ಕಾಗಿ ಸಲ್ಲಿಸಿದ ಸೇವೆಯನ್ನು ವಿವರಿಸುವಾಗ ಈ ಮಾತು ಬಂದಿದೆ.

ಸ್ವಾರಸ್ಯ : ಮೈಸೂರು ರಾಜ್ಯಕ್ಕಾಗಿ ಸಲ್ಲಿಸಿದ ಸೇವೆ ಇಲ್ಲಿ ಸ್ವಾರಸ್ಯಕರವಾಗಿ ಮೂಡಿದ ಬಂದಿದೆ.

## ಪಾಠ–5 ನಿಜವಾದ ಆದರ್ಶ ಪುರುಷ ಯಾರಾಗಬೇಕು ?

### ಕೃತಿಕಾರರ ಪರಿಚಯ

ಕೇಶವ ಬಲಿರಾಮ ಹೆಡಗೇವಾರರು :– ಕೇಶವ ಬಲಿರಾಮ ಹೆಡಗೇವಾರರು 1889ರ ಏಪ್ರಿಲ್ 1 ರಂದು ನಾಗಪುರ ಎಂಬಲ್ಲಿ ಜನಿಸಿದರು.ಇವರು "ಪ್ರೇರಣಾ, ಭಾರತ ಭಾರತಿ" ಎಂಬಿತ್ಯಾದಿ ಕೃತಿಗಳನ್ನು ಬರೆದಿದ್ದಾರೆ. ಇವರು "ರಾಷ್ಟ್ರೀಯ ಸ್ವಯಂಸೇವಕ ಸಂಘ" ಸ್ಥಾಪಿಸಿದರು.

### I. ಒಂದು ವಾಕ್ಯದ ಪ್ರಶ್ನೆಗಳು .

1. ಯಾವುದು ಎಂದೆಂದೂ ನಮ್ಮ ಆದರ್ಶವಾಗಿರಬೇಕು ?
"ತತ್ತ್ವವೇ ನಮ್ಮ ಆದರ್ಶವಾಗಿರಬೇಕು"

2. ಯಾವ ವ್ಯಕ್ತಿ ನಮಗೆ ಆದರ್ಶವಾಗಬಲ್ಲನು ?
"ನಮ್ಮಿಂದ ಹಾಗೂ ಆತನಿಂದ ದೂರ ಹೋಗದಂತಹ ವ್ಯಕ್ತಿ"

3. ಗುರುಪೂರ್ಣಿಮಾ ದಿನದಂದು ಲೇಖಕರು ಯಾರನ್ನು ಪೂಜಿಸುತ್ತಾರೆ ?
"ಧ್ವಜವನ್ನೇ ಗುರುವೆಂದು ಪೂಜಿಸುತ್ತಾರೆ"

4. ತಿಲಕರನ್ನು ಯಾವ ರೀತಿ ಚಿತ್ರಿಸಲಾಗಿತ್ತು ?
"ತಿಲಕರ ಕೈಗಳಲ್ಲಿ ಶಂಖ, ಚಕ್ರ, ಗದೆ, ಪದ್ಮಗಳನ್ನು ನೀಡಿ ದೇವರಂತೆ ಚಿತ್ರಿಸಲಾಗಿದೆ"

5. ಶಿವಚರಿತ್ರೆಯಲ್ಲಿ ಯಾವ ಉಲ್ಲೇಖ ಮಾಡಲಾಗಿದೆ ?
"ಶಿವಾಜಿಯನ್ನು ಶ್ರೀ ಶಂಕರರ ಅವತಾರವೆಂದು ಮಾಡಿದೆ"

### II. ಮೂರು ನಾಲ್ಕು ವಾಕ್ಯದ ಪ್ರಶ್ನೆಗಳು .

1. ಜನರು ಮೂರ್ತಿ ಪೂಜೆ ಮಾಡಲು ಕಾರಣವೇನು ?
ನಿರಾಕಾರ ರೂಪದಲ್ಲಿ ಪೂಜಿಸಲು ಆಗದ ಕಾರಣ ಮೂರ್ತಿಯಾಗಿ ರೂಪಿಸಿ ಜನರು ಪೂಜಿಸುತ್ತಾರೆ

2. ಯಾವ ವ್ಯಕ್ತಿಯನ್ನು ನಾವು ಆದರ್ಶವಾಗಿ ಸ್ವೀಕರಿಸಬೇಕು ?
"ಯಾರ ಜೀವನ ಕುಸುಮವು ಪೂರ್ಣವಾಗಿ ಅರಳಿದೆಯೋ, ಭಯವಿಲ್ಲದೆ ನಿಂತಿದೆಯೋ, ಯಾರ ಧ್ಯೇಯ ಶಾಶ್ವತ ಸತ್ಯವಾಗಿದೆಯೋ ಅಂತಹ ವ್ಯಕ್ತಿಯನ್ನು"

3. ಮೊಗ್ಗನ್ನು ಆದರ್ಶವಾಗಿ ಸ್ವೀಕರಿಸಲು ಇರುವ ತೊಡಕುಗಳೇನು ?
"ಅರೆಬಿರಿದ ಮೊಗ್ಗುಗಳಲ್ಲಿಕ್ರಿಮಿಕೀಟಗಳು ಸೇರಿದರೆ, ಆ ಮೊಗ್ಗು ಪೂರ್ಣ ವಿಕಸಿತವಾಗಲಾರದು. ಆದ್ದರಿಂದ ಮೊಗ್ಗಿನ ಬದಲು ಪೂರ್ಣ ಅರಳಿದ ಪುಷ್ಪಗಳೇ ನಮಗೆಆದರ್ಶ"

4. ಧ್ವಜವನ್ನೇ ನಮ್ಮ ಗುರುವೆಂದು ಸ್ವೀಕರಿಸಿದ್ದೇವೆ ಎಂದು ಲೇಖಕರು ಹೇಳಿದ್ದಾರೇಕೆ ?
"ಯಾವ ಧ್ವಜವನ್ನು ನೋಡಿದೊಡನೆ ನಮ್ಮ ರಾಷ್ಟ್ರದ ಸಮಸ್ತ ಇತಿಹಾಸ, ಕಣ್ಣ ಮುಂದೆ ಬಂದು , ನಮ್ಮ ಹೃದಯ ಭಾವನೆಗಳು ಉಕ್ಕಿ, ಸ್ಫೂರ್ತಿ ಸಂಚಾರವಾಗುತ್ತದೆಯೋ ಆ ಧ್ವಜವೇ ನಮ್ಮ ಗುರು.

5. ವ್ಯಕ್ತಿಗಳನ್ನು ಆದರ್ಶವಾಗಿ ಸ್ವೀಕರಿಸಲು ಇರುವ ತೊಡಕುಗಳೇನು ?
"ನಾವು ಆದರ್ಶವೆಂದು ಭಾವಿಸುವ ವ್ಯಕ್ತಿಯಿಂದ ಏನಾದರೂ ತಪ್ಪಾದರೆ ,ಆ ಜಾಗಕ್ಕೆ ಬೇರೊಬ್ಬನನ್ನು ಹುಡುಕಬೇಕಾಗುತ್ತದೆ. ಆತನಿಂದಲೂ ದೋಷ ಕಂಡುಬಂದರೆ, ಆತನ ಬಗ್ಗೆ ಇದ್ದ ಗೌರವ ಹಾರಿಹೋಗಿ, ಇನ್ನೊಬ್ಬರ ಹುಡುಕಾಟ ಮತ್ತೆ ಮುಂದುವರೆಯುತ್ತದೆ.

## ಪಾಠ–6 ಎದೆಗೆಬಿದ್ದ ಅಕ್ಷರ

ಲೇಖಕರ ಪರಿಚಯ : ದೇವನೂರ ಮಹಾದೇವ

ದೇವನೂರ ಮಹಾದೇವರವರು 1948ರಲ್ಲಿ ದೇವನೂರಿನಲ್ಲಿ ಜನಿಸಿದರು. ಎದೆಗೆ ಬಿದ್ದ ಅಕ್ಷರ 'ದ್ಯಾವನೂರು, ಒಡಲಾಳ, ಇವರ ಕೃತಿಗಳು.ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ.

**(ಅ).ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :**

1. ಇಂದಲ್ಲ–ನಾಳೆ ಫಲ ಕೊಡುವ ಅಂಶಗಳಾವುವು?
   ಭೂಮಿಗೆ ಬಿದ್ದ ಬೀಜ ಮತ್ತು ಎದೆಗೆ ಬಿದ್ದ ಅಕ್ಷರ
2. ಮನೆಮಂಚಮ್ಮ ಯಾರು?
   ಗ್ರಾಮದೇವತೆ
3. ಮನೆ ಮಂಚಮ್ಮನ ಕತೆ ಹೇಳಿದ ಕವಿ ಯಾರು?
   ಕವಿ ಸಿದ್ಧಲಿಂಗಯ್ಯ
4. 'ಶಿವಾನುಭವ ಶಬ್ದಕೋಶ' ಪುಸ್ತಕ ಬರೆದವರು ಯಾರು?
   ಹಳಕಟ್ಟಿ
5. ವಚನಕಾರರಿಗೆ ಯಾವುದು ದೇವರಾಗಿತ್ತು?
   ಪ್ರಜ್ಞೆ
6. ಅಶೋಕ ಪೈ ಅವರ ವೃತ್ತಿ ಯಾವುದು?
   ಮನೋವೈದ್ಯ
7. ದೇವನೂರರ ' ನನ್ನ ದೇವರು' ಯಾರೆಂಬುದನ್ನು ಸ್ಪಷ್ಟೀಕರಿಸಿ.
   ಕರುಣೆಯ ಬುದ್ಧ ಸಿದ್ಧಲಿಂಗಯ್ಯ

**(ಆ). ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :**

1. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?
   ಕೆಲವು ಜನ ಒಂದು ಕೋಣೆಯಲ್ಲಿ ಟಿ.ವಿ ನೋಡುವಾಗ ಅವರಲ್ಲಿ ಮೂಡುವ ಸುಖ, ದುಃಖದ ಭಾವನೆಗಳು ಪಕ್ಕದ ಕೊಠಡಿಯಲ್ಲಿ ಇದನ್ನು ನೋಡದವರ ಮೇಲೂ ಪರಿಣಾಮ ಬೀರುತ್ತದೆ.
2 . ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ.
   ಅನುಭವದಿಂದ ಬಂದ ಜ್ಞಾನ. ನಡೆಯಿಂದ ನುಡಿ ಹುಟ್ಟಿದರೆ ಅದೇ ಅರಿವು.

**ಇ). ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :**

1. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ."

ಆಯ್ಕೆ:– ಈ ಸಾಲನ್ನು ದೇವನೂರ ಮಹಾದೇವರವರ "ಎದೆಗೆ ಬಿದ್ದ ಅಕ್ಷರ" ಪಾಠದಿಂದಆರಿಸಿದೆ.

ಸಂದರ್ಭ:– ಮನೆ ಮಂಚಮ್ಮನಿಗೆ ಗುಡಿ ಕಟ್ಟುವಾಗ ಈ ಮಾತು ಬಂದಿದೆ.

ಸ್ವಾರಸ್ಯ:– ಮನೆ ಮಂಚಮ್ಮನಿಗೆ ಜನರ ಮೇಲೆ ಇರುವ ಕಾಳಜಿಯನ್ನು ಕಾಣಬಹುದು.

2. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ."

3. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು"

ಆಯ್ಕೆ:– ಈ ಸಾಲನ್ನು ದೇವನೂರ ಮಹಾದೇವರವರ "ಎದೆಗೆ ಬಿದ್ದ ಅಕ್ಷರ" ಪಾಠದಿಂದಆರಿಸಿದೆ.

ಸಂದರ್ಭ:- ಗ್ರಾಮದೇವತೆಯ ಬಗ್ಗೆ ಚರ್ಚಿಸುತ್ತಾ, ಅರಿವು, ಪ್ರಜ್ಞೆ ಹಾಗೂ ವಚನಕಾರರ ಬಗ್ಗೆ ಹೇಳುವ ಸಂದರ್ಭದಮಾತುಗಳು.

ಸ್ವಾರಸ್ಯ:– ಮನೆ ಮಂಚಮ್ಮನಿಗೆ ಜನರ ಮೇಲೆ ಇರುವ ಕಾಳಜಿಯನ್ನು ಕಾಣಬಹುದು.

## ಪಾಠ–7 ಶ್ರೇಷ್ಠ ಭಾರತೀಯ ಚಿಂತನೆಗಳು

**ಕೃತಿಕಾರರ ಪರಿಚಯ**

ಶತಾವಧಾನಿ ಡಾ.ಆರ್.ಗಣೇಶ್:–ಶತಾವಧಾನಿ ಡಾ. ಆರ್.ಗಣೇಶ್‌ರವರು ಕೋಲಾರದವರು. ಇವರು"ಭಾರತೀಲೋಚನ, ಬ್ರಹ್ಮಪುರಿಯಹ ಭಿಕ್ಷುಕ, ನಿತ್ಯನೀತಿ, ಕಲಾಕೌತುಕ ಎಂಬಿತ್ಯಾದಿ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ, ಗೌರವ ಡಿ.ಲಿಟ್. ಪದವಿ ದೊರೆತಿದೆ.

### I. ಒಂದು ವಾಕ್ಯದ ಪ್ರಶ್ನೆಗಳು .

1. ಧರ್ಮ ಎಂದು ನಮ್ಮ ಪರಂಪರೆ ಯಾವುದನ್ನು ಒಕ್ಕಣಿಸಿದೆ ?
   "ಇನ್ನೊಬ್ಬರ ಋಣ ತೀರಿಸಲು ಮಾಡುವ ಪ್ರಯತ್ನವೇ ಧರ್ಮ"
2. ಧರ್ಮದ ಆಚರಣೆಗಿರುವ ಪ್ರಧಾನ ಮಾರ್ಗ ಯಾವುದು ?
   "ಯಜ್ಞವೇ ಧರ್ಮದ ಮಾರ್ಗ"
3. ಬಾಳು ಹಸನಾಗಬೇಕಾದರೆ ಯಾವುದನ್ನು ಮೀರಬೇಕು ?
   "ಜಿಪುಣತನವನ್ನು ಮೀರಬೇಕು"
4. ಯಜ್ಞ ಎಂಬ ಶಬ್ದಕ್ಕೆ ಏನೇನು ಅರ್ಥಸ್ವಾರಸ್ಯಗಳಿವೆ ?
   "ದೇವತಾರಾಧನೆ, ಹಂಚಿಕೊಂಡು ಬಾಳುವಿಕೆ, ತ್ಯಾಗಮಾಡುವಿಕೆ" ಎಂಬ ಅರ್ಥಗಳಿವೆ.
5. ಅನ್ನದ ವಿಷಯದಲ್ಲಿ ವೇದ ಏನು ಹೇಳಿದೆ ?
   "ಮನುಷ್ಯಾ ಅನ್ನವಿಲ್ಲದೆ ಬದುಕಲಾರ ಎಂದು ಹೇಳಿದೆ.
6. ಪುರುಷಾರ್ಥ ಎಂದರೆ ಏನೆಂದು ಲೇಖಕರ ಅಭಿಪ್ರಾಯ ?
   "ತನ್ನನ್ನು ತಾನು ಅರಿಯುವ ಬಗೆ"
7. ಆಚಾರವು ಯಾವುದಕ್ಕೆ ಸಂಬಂಧಿಸಿದೆ ?
   "ಮಾನವನ ಅಂತರಂಗದ ಶಿಸ್ತಿಗೆ .
8. ಯಾವುದು ಸ್ವಧರ್ಮ ಎಂದು ಲೇಖಕರು ಹೇಳುತ್ತಾರೆ ?
   "ವ್ಯಕ್ತಿ ತನ್ನ ಬದುಕಿನ ಜೊತೆಗೆ ತನ್ನ ಸುತ್ತಮುತ್ತಲ ಜಗತ್ತನ್ನು ಕಾಪಾಡುವುದು ಸ್ವಧರ್ಮ"
9. ಸ್ವಧರ್ಮದ ವಿಷಯದಲ್ಲಿ ಎಲ್ಲಕ್ಕಿಂತ ಮುಖ್ಯವಾದದ್ದು ಯಾವುದು ?
   "ವ್ಯಕ್ತಿಯ ಒಳಗಿನ ನಿಶ್ಚಯ ಎಲ್ಲಕ್ಕಿಂತಲೂ ಮಿಗಿಲು"
10. ಮನಸ್ಸಿನ ನಿಜವಾದ ಉನ್ನತಿಯನ್ನು ತೋರುವ ಅಂಶ ಯಾವುದು ?
   "ತ್ಯಾಗವನ್ನು ಮಾಡಿ ಪಶ್ಚಾತ್ತಾಪ ಪಡದಿರುವುದು"

### II. ಮೂರು ನಾಲ್ಕು ವಾಕ್ಯದ ಪ್ರಶ್ನೆಗಳು .

1.ಋತ ಎಂದರೇನು ?

"ಭೂಮಿಯ ಗುರುತ್ವವು ಚೆಂಡಿನ ಮೇಲೆ ಕಾರ್ಯವೆಸಗುವುದು "ಋತ"

2.ಋಣಕ್ಕೂ ಧರ್ಮಕ್ಕೂ ಇರುವ ಸಂಬಂಧವೇನು ?

"ಭೂಮಿಗೆ ಕೃತಜ್ಞರಾಗಿರುವ ಭಾವವೇ ಋಣ"

"ಸಾಲದ ಋಣವನ್ನು ತೀರಿಸಲು ಮಾಡುವ ಪ್ರಯತ್ನವೇ ಧರ್ಮ"

3.ಯಜ್ಞಕ್ಕಿರುವ ಎರಡು ಮುಖಗಳು ಯಾವುವು ?

"ತ್ಯಾಗ ಹಾಗೂ ತ್ಯಾಗ ಮಾಡಲು ಬೇಕಾದ ಪರಿಪಾಕ ತಪಸ್ಸು"

4.ಮನುಷ್ಯನು ತನ್ನ ಒಳಿತನ್ನು ಹೇಗೆ ಸಾಧಿಸಬಹುದು ?

'ಇಷ್ಟ ಎಂಬುದು ಯಜ್ಞದ ಸಂಕೇತ' , 'ಪೂರ್ತ ಎಂಬುದು ಲೋಕೋಪಕಾರದ ಸಂಕೇತ' .

5.ಪುರುಷ ಎಂಬ ಶಬ್ದಕ್ಕಿರುವ ಅರ್ಥವೇನು ?

'ಪುರುಷ' ಎಂಬ ಪದಕ್ಕೆ ಗಂಡು ಎಂಬ ಸಣ್ಣ ಅರ್ಥವಿರದೆ,
ತನ್ನನ್ನು ತಾನು ಅರಿಯುವ ಬಗೆಯೇ ಪುರುಷಾರ್ಥ. ಎಂಬ ಅರ್ಥವಿದೆ.

6.ಸ್ವಧರ್ಮ ಯಾವುದನ್ನು ಅವಲಂಬಿಸಿದೆ ?

"ವ್ಯಕ್ತಿ ತನ್ನ ಬದುಕಿನ ಜೊತೆಗೆ ತನ್ನ ಸುತ್ತಮುತ್ತಲ ಜಗತ್ತನ್ನು ಕಾಪಾಡುವುದು ಸ್ವಧರ್ಮ"

**III .ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ .**

1. "ಚಿನ್ನವಿಲ್ಲದೆ ಬದುಕಬಹುದು, ಅನ್ನವಿಲ್ಲದೆ ಬದುಕಲಾದೀತೆ"
2. "ಧರ್ಮದ ಆಚರಣೆಗಿರುವ ಪ್ರಧಾನ ಮಾರ್ಗವೇ ಯಜ್ಞ" .
3. "ಧರ್ಮದ ಕೇಂದ್ರ ಈಶ್ವರನಲ್ಲಿದೆ" .
4. "ಪುರುಷಾರ್ಥಗಳ ಸಾಧನೆಗೆ ಸ್ವಧರ್ಮಾಚರಣೆ ಅತ್ಯಾವಶ್ಯಕ" .

ಆಯ್ಕೆ : "ಈ ವಾಕ್ಯವನ್ನು "ಡಾ.ಆರ್.ಗಣೇಶ್" ಅವರ "ಶ್ರೇಷ್ಠ ಭಾರತೀಯ ಚಿಂತನೆಗಳು" ಎಂಬ ಪಾಠದಿಂದ ಆರಿಸಿದೆ.

ಸಂದರ್ಭ : "ಭಾರತದ ಶ್ರೀಷ್ಟ ಚಿಂತನೆಗಳ ಬಗ್ಗೆ ಲೇಖಕರು ಮಾತನಾಡುವ ಸಂದರ್ಭ"

ಸ್ವಾರಸ್ಯ "ನಮ್ಮ ದೇಶದ ತತ್ವಗಳನ್ನು ಪಾಲಿಸಬೇಕು ಎಂಬುದು ಸ್ವಾರಸ್ಯಕರವಾಗಿದೆ"

## ಪಾಠ–8 ವೃಕ್ಷಸಾಕ್ಷಿ

ಲೇಖಕರ ಪರಿಚಯ : ದುರ್ಗಸಿಂಹ

ದುರ್ಗಸಿಂಹ 1031ರಲ್ಲಿ ಸಯ್ಯಡಿಯಲ್ಲಿ ಜನಿಸಿದನು. 'ಕನ್ನಡ ಪಂಚತಂತ್ರ' ಕೃತಿ.
ಇದರಲ್ಲಿ 5 ತಂತ್ರಗಳು, 48 ಉಪಕತೆಗಳಿವೆ.

**(ಅ).ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :**

1. 'ವೃಕ್ಷಸಾಕ್ಷಿ' ಕತೆಯನ್ನು ಯಾವ ಕೃತಿಯಿಂದ ಆರಿಸಲಾಗಿದೆ?

ಕನ್ನಡ ಪಂಚತಂತ್ರ

2.ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?

ಕಳ್ಳತನ

3.ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು?

ವೃಕ್ಷಸಾಕ್ಷಿಗಾಗಿ

4.ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?

ದೇವರು, ಗುರುಗಳ ಪೂಜೆ

5.ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು?

ಜಗಳದ ನ್ಯಾಯ ನೀಡಲು

**(ಆ). ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :**

1. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?

ನಾವು ಸ್ವಲ್ಪ ಹೊನ್ನನ್ನು ತೆಗೆದುಕೊಂಡು ಉಳಿದದ್ದನ್ನು ಇಲ್ಲೇ ಬಚ್ಚಿಡೋಣ ಎಂದನು

2. ದುಷ್ಟುಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?

ನೀನು ಮರದ ಪೊಟರೆಯಲ್ಲಿ ಅಡಗಿ ಧರ್ಮಬುದ್ಧಿಯೇ ಹೊನ್ನು ಕದ್ದನೆಂದು ಹೇಳು ಎಂದನು.

3. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?

ನಿನ್ನಲ್ಲಿ ದೇವತೆಗಳು ವಾಸಿಸುತ್ತಾರೆ. ಅದರಿಂದ ನಿನ್ನನ್ನು ಸಾಕ್ಷಿಮಾಡುತ್ತಿದ್ದೇವೆ.

**(ಇ).ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :**

1. "ಪೊನ್ನನೆಲ್ಲಮಂ ನೀನೆ ಕೊಂಡೆ"
2. "ಈತನ ಮಾತು ಅಶ್ರುತಪೂರ್ವಮ್"
3. "ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಟಿವ ಬಗೆ"
4. "ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ"
5. "ಹುಸಿಯದ ಬೇಹಾರಿಯೇ ಇಲ್ಲ"

ಆಯ್ಕೆ:– ಈ ಸಾಲನ್ನು ದುರ್ಗಸಿಂಹನ "ವೃಕ್ಷಸಾಕ್ಷಿ" ಪಾಠದಿಂದ ಆರಿಸಿದೆ.

ಸಂದರ್ಭ:– ದುಷ್ಟಬುದ್ಧಿಯು ಧರ್ಮಬುದ್ಧಿ ಮೇಲೆ ಕಳ್ಳತನವನ್ನು ಆರೋಪಿಸಿದಾಗ ಈ ಮಾತು ಬಂದಿದೆ.

ಸ್ವಾರಸ್ಯ:– "ಮಾಡಿದುಣ್ಣೊ ಮಾರಾಯ" ನೀತಿಯಂತೆ ಇನ್ನೊಬ್ಬರಿಗೆ ಮೋಸ ಮಾಡಲು ಹೋಗಿ ತಾನೇ ಹಾಳಾದ ರೀತಿ ಇಲ್ಲಿ ಮೂಡಿಬಂದಿದೆ.

## ಪದ್ಯ–1 ಸಂಕಲ್ಪಗೀತೆ

ಲೇಖಕರ ಪರಿಚಯ : ಜಿ.ಎಸ್.ಶಿವರುದ್ರಪ್ಪ

ಜಿ.ಎಸ್.ಶಿವರುದ್ರಪ್ಪರವರು 1926ರಲ್ಲಿ ಶಿಕಾರಿಪುರದಲ್ಲಿ ಜನಸಿದರು. ಎದೆ ತುಂಬಿ ಹಾಡಿದೆನು 'ಸಾಮಗಾನ, ಅನಾವರಣ ಕೃತಿಗಳು. ಪಂಪಪ್ರಶಸ್ತಿ, ರಾಷ್ಟ್ರಕವಿ ಬಿರುದು ಲಭಿಸಿದೆ.

(ಅ).ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

1. ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು? ಬಿರುಗಾಳಿಗೆ ತುಗಾಡುವ ಹಡಗನ್ನು
2. ನದೀ ಜಲಗಳು ಏನಾಗಿವೆ? ಕಲುಷಿತವಾಗಿವೆ.
3. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು ? ಕಲುಷಿತವಾದ ನದೀ ಜಲಗಳಿಗೆ
4. ಕಾಡುಮೇಡುಗಳ ಸ್ಥಿತಿ ಹೇಗಿದೆ? ಬರಡಾಗಿದೆ.
5. ಯಾವ ಎಚ್ಚರದೊಳು ಬದುಕಬೇಕಿದೆ? ಮತಗಳೆಲ್ಲವೂ ಪಥಗಳು ಎನ್ನುವ

ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :

ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ.
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ.

(ಆ). ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

1.ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ ?
2. ಕಾಡುಗಳಿಗೆ ಹೇಗೆ ಮುಟ್ಟಬೇಕಿದೆ ?
3. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ ?
4. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು ?

(ಇ).ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ :

1. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ?
2. ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

(ಈ). ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು

ಈ ಸಾಲಗಳನ್ನು ಶಿವರುದ್ರಪ್ಪನವರ 'ಸಂಕಲ್ಪಗೀತೆ' ಪದ್ಯದಿಂದ ಆರಿಸಿದೆ. ಕವಿಯು ಪ್ರೀತಿಯ ಹಣತೆಯನ್ನು ಹಚ್ಚುವ ಮೂಲಕ ನಮ್ಮ ಬದುಕನ್ನು ಎಚ್ಚರದಿಂದ ನಡೆಸಬೇಕು. ಕಲುಷಿತವಾಗಿರುವ ನೀರಿಗೆ ಮುಂಗಾರಿನ ಮಳೆಯಾಗಿ ಬರಡು ಕಾಡುಗಳನ್ನು ಹಸಿರಾಗಿಸೋಣ. ಸೋತವರ ಗೆಲುವಿಗೆ ಹೊಸ ಭರವಸೆ ಮೂಡಿಸಿ ಜಾತಿ ಮತಗಳನ್ನು ಮರೆತು ಜೀವನವನ್ನು ಹಸನಾಗಿಸಬೇಕು ಎಂದಿದ್ದಾರೆ.

(ಉ).ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :

1. "ಪ್ರೀತಿಯ ಹಣತೆಯ ಹಚ್ಚೋಣ"
2. "ಮುಂಗಾರಿನ ಮಳೆಯಾಗೋಣ"
3. "ಹೊಸ ಭರವಸೆಗಳ ಕಟ್ಟೋಣ"
4. "ಹೊಸ ಎಚ್ಚರದೊಳು ಬದುಕೋಣ"

ಆಯ್ಕೆ : ಈ ಸಾಲನ್ನು ಶಿವರುದ್ರಪ್ಪನವರ 'ಸಂಕಲ್ಪಗೀತೆ' ಪದ್ಯದಿಂದ ಆರಿಸಿದೆ.

ಸಂದರ್ಭ : ಸಂಕಲ್ಪ ಮತ್ತು ಕಾರ್ಯರೂಪದ ಅಭಿಪ್ರಾಯವನ್ನು ತಿಳಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ : ಜೀವನದಲ್ಲಿ ಧನಾತ್ಮಕ ಭಾವನೆಯನ್ನು, ದೃಢಸಂಕಲ್ಪವನ್ನು ಹೊಂದಿರಬೇಕೆಂಬುದು ಸ್ವಾರಸ್ಯಕರವಾಗಿ ಮೂಡಿದೆ.

## ಪದ್ಯಭಾಗ–2 ಹಕ್ಕಿ ಹಾರುತಿದೆ ನೋಡಿದಿರಾ

ಲೇಖಕರ ಪರಿಚಯ : ದ.ರಾ.ಬೇಂದ್ರೆ

ದ.ರಾ.ಬೇಂದ್ರೆಯವರು 1896ರಲ್ಲಿ ಧಾರವಾಡದಲ್ಲಿ ಜನಿಸಿದರು. ಗರಿ, ಉಯ್ಯಾಲೆ, ನಾದಲೀಲೆ, ನಾಕುತಂತಿ ಇವರ ಕೃತಿಗಳು. ಜ್ಞಾನಪೀಠ ಪ್ರಶಸ್ತಿ ಲಭಿಸಿದೆ.

(ಅ).ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

1.ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ ? ಕಣ್ಣು ಮುಚ್ಚಿ ಬಿಡುವುದರಲ್ಲಿ
2.ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ? ಬಿಳಿ ಹೊಳೆ ಬಣ್ಣಗಳಿವೆ
3.ಹಕ್ಕಿಯ ಕಣ್ಣುಗಳು ಯಾವುವು? ಸೂರ್ಯ ಚಂದ್ರರು
4.ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ? ಸಾರ್ವಭೌಮರ (ರಾಜರ)
5.ಹಕ್ಕಿ ಯಾರನ್ನು ಹರಸಿದೆ? ಹಸುಮಕ್ಕಳನ್ನು
6.ಹಕ್ಕಿಯು ಯಾವುದರ ಸಂಕೇತವಾಗಿದೆ? ಕಾಲದ ಸಂಕೇತ
7.ಹಕ್ಕಿಯ ಚುಂಚಗಳು ಎಲ್ಲಿಯವರೆಗೂ ಚಾಚಿವೆ ? ದಿಗಂತದ ಆಚೆಗೂ ಚಾಚಿವೆ

ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :

ನೀಲಮೇಘ ಮಂಡಲ – ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯಮಾಲೆಯ ಸಿಕ್ಕಿಸಿಕೊಂಡು
ಸೂರ್ಯ – ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ ?

(ಆ). ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

1. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?
2. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?
3. ಹಕ್ಕಿಯು ಯಾವ ಮೇರೆ ಮೀರಿ, ನೀರನ್ನು ಹೀರಿದೆ ?

(ಇ).ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ :

1. ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳಾವುವು?

(ಈ). ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು

ಈ ಸಾಲಗಳನ್ನು ಬೇಂದ್ರೆಯವರ "ಹಕ್ಕಿ ಹಾರುತಿದೆ ನೋಡಿದಿರಾ" ಪದ್ಯದಿಂದ ಆರಿಸಿದೆ. ಕವಿಯು ಕಾಲವನ್ನು ಹಕ್ಕಿಗೆ ಹೋಲಿಸಿದ್ದಾರೆ. ಕಾಲ ಪಕ್ಷಿಯು ಕಣ್ಣು ಮುಚ್ಚಿ ಬಿಡುವ ವೇಳೆಗೆ ದೂರಕ್ಕೆ ಚಲಿಸಿದೆ. ಹಕ್ಕಿಗೆ ಬಣ್ಣ ಬಣ್ಣದ ರೆಕ್ಕೆಗಳಿವೆ. ಸೂರ್ಯ–ಚಂದ್ರರೇ ಇದರ ಕಣ್ಣುಗಳು. ಕಾಲಪಕ್ಷಿಯು ಸಾಮ್ರಾಜ್ಯಗಳನ್ನು ಉರುಳಿಸಿ, ಹಸು ಮಕ್ಕಳನ್ನು ಹರಸಿದೆ. ಮಾನವ ಮಂಗಳ ಲೋಕದ ಅಂಗಳಕ್ಕೇರಿ ಆಚೆಗೂ ಚಲಿಸಿದ್ದಾನೆ. ಆದರೆ ಕಾಲದ ಮುಂದೆ ಮಾನವ ಚಿಕ್ಕವನು ಎಂಬುದು ಕವಿಯ ಆಶಯವಾಗಿದೆ.

(ಉ).ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :

1. "ರೆಕ್ಕೆಗಳೆರಡೂ ಪಕ್ಕದಲ್ಲುಂಟು "
2. "ಸಾರ್ವಭೌಮರಾ ನೆತ್ತಿಯ ಕುಕ್ಕಿ"
3. "ಬಲ್ಲರು ಯಾರಾ ಹಾಕಿದ ಹೊಂಚ "
4. "ಹೊಸಕಾಲದ ಹಸುಮಕ್ಕಳ ಹರಸಿ"
5. "ಮಂಗಳ ಲೋಕದ ಅಂಗಳಕೇರಿ"

ಆಯ್ಕೆ : ಈ ಸಾಲನ್ನು ಬೇಂದ್ರೆಯವರು "ಹಕ್ಕಿ ಹಾರುತಿದೆ ನೋಡಿದಿರಾ" ಪದ್ಯದಿಂದ ಆರಿಸಿದೆ.

ಸಂದರ್ಭ : ಕವಿಯು ಕಾಲವನ್ನು ಹಾರುವ ಹಕ್ಕಿಯೊಂದಿಗೆ ಹೋಲಿಸಿ ವಿವರಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ:– ಚಲನಶೀಲತೆ ಜೀವಂತಿಕೆಯ ಗುಣ. ಕಾಲದ ಮಹಿಮೆಯು ಇಲ್ಲಿ ಸ್ವಾರಸ್ಯಕರವಾಗಿದೆ

## ಪದ್ಯಪಾಠ – 3 ಹಲಗಲಿ ಬೇಡರು

**(ಅ).ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :**

1. ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಏನು?
   ಆಯುಧಗಳನ್ನು ಹೊಂದದಿರುವುದು.
2. ಹಲಗಲಿಯ ನಾಲ್ವರು ಪ್ರಮುಖರು ಯಾರು?
   ಹನುಮಾ, ಬಾಲ, ಜಡಗ, ರಾಮ
3. ಹಲಗಲಿಯ ಗುರುತು ಉಳಿಯದಂತಾದುದು ಏಕೆ?
   ಬೆಂಕಿ ಹಚ್ಚಿದ್ದರಿಂದ
4. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?
   ಹತಾರ ಕದನ
5. ಹಲಗಲಿ ಗ್ರಾಮ ಎಲ್ಲಿದೆ?
   ಬಾಗಲಕೋಟೆ ಜಿಲ್ಲೆ

**ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :**

ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣೆ ಹಾಲಾ
ಉಪ್ಪು ಎಣ್ಣೆ ಅರಿಸಿಣ ಜೀರಗಿ ಅಕ್ಕಿಸಕ್ಕಾರಿ ಬೆಲ್ಲಾ
ಗಂಗಳ ಚರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ
ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ

**(ಆ). ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :**

1. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?
2. ಹಲಗಲಿಗೆ ದಂಡು ಬರಲು ಕಾರಣವೇನು?
3. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?
4. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?

**(ಇ).ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ :**

1.ಹಲಗಲಿ ದಂಗೆಗೆ ಕಾರಣವೇನು? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು?
2. ಹಲಗಲಿ ದಂಗೆಯ ಪರಿಣಾಮವೇನು?

**(ಈ). ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು**

ಈ ಸಾಲನ್ನು ಗದ್ದಗಿಮಠರವರ "ಹಲಗಲಿಯ ಬೇಡರು" ಪದ್ಯದಿಂದ ಆರಿಸಿದೆ. ಬೇಡರಾದ ರಾಮ, ಹನುಮ, ಜಡಗ, ಬಾಲರು ಸಭೆ ಸೇರಿ ಬ್ರಿಟೀಷರ ಆಯುಧ ನೀತಿಯ ವಿರುದ್ಧ ತಂತ್ರ ರೂಪಿಸಿ ಹೋರಾಡಿದರು. ಕೋಪಗೊಂಡ ಬ್ರಿಟೀಷರು ಬೇಡರ ಮನೆಗಳಿಗೆ ನುಗ್ಗಿ , ಕೈಗೆ ಸಿಕ್ಕ ವಸ್ತುಗಳನ್ನು ಲೂಟಿ ಮಾಡಿದರು. ಎಲ್ಲರಿಗೂ ಮದ್ದುಗುಂಡು ಹಾರಿಸಿ ಹಲಗಲಿಗೆ ಬೆಂಕಿ ಇಟ್ಟು ಬೂದಿ ಮಾಡಿದರು.

**(ಉ).ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :**

1. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"
2. "ಜೀವ ಸತ್ತು ಹೋಗುವುದು ಗೊತ್ತ"
3. ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ"
4. "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟ"

ಆಯ್ಕೆ:– ಈ ಸಾಲನ್ನು ಗದ್ದಗಿಮಠರವರ "ಹಲಗಲಿಯ ಬೇಡರು" ಪದ್ಯದಿಂದ ಆರಿಸಿದೆ.
ಸಂದರ್ಭ: ಬೇಡರು ತಮ್ಮ ಆಯುಧಗಳನ್ನು ಹಿಂದಿರುಗಿಸದೆ ದಂಗೆ ಎದ್ದ ಸಂದರ್ಭದಲ್ಲಿ ಈ ಮಾತು ಬಂದಿದೆ.
ಸ್ವಾರಸ್ಯ : ಹಲಗಲಿ ಬೇಡರ ಸ್ವಾಭಿಮಾನ, ದೇಶಪ್ರೇಮ ಇಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ.

## ಪದ್ಯಭಾಗ–4 ಕೌರವೇಂದ್ರನ ಕೊಂದೆ ನೀನು

ಲೇಖಕರ ಪರಿಚಯ : ಕುಮಾರವ್ಯಾಸ

ಕುಮಾರವ್ಯಾಸನು 15ನೇ ಶತಮಾನದಲ್ಲಿ ಗದುಗಿನ ಕೋಳಿವಾಡದಲ್ಲಿ ಜನಿಸಿದನು
'ಕುಮಾರವ್ಯಾಸ ಭಾರತ ಕೃತಿ. 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಬಿರುದು.

**(ಅ).ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :**

1. ಶ್ರೀ ಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು ?
   ಬರಸೆಳೆದು
2 .ಕುಮಾರ ವ್ಯಾಸನ ಆರಾಧ್ಯ ಧೈವ ಯಾರು?
   ಗದುಗಿನ ವೀರನಾರಾಯಣ.
3. ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ಯಾರು?
   ನಕುಲ–ಸಹದೇವ.
4. ಕುಮಾರವ್ಯಾಸನಿಗಿರುವ ಬಿರುದು ಯಾವುದು ?
   "ರೂಪಕ ಸಾಮ್ರಾಜ್ಯ ಚಕ್ರವರ್ತಿ"

**ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :**

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ

**(ಇ).ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ :**

1) ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು?
2) ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

**(ಈ). ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು**

ಈ ಸಾಲನ್ನು ಕುಮಾರವ್ಯಾಸನ "ಕೌರವೇಂದ್ರನ ಕೊಂದೆ ನೀನು" ಪದ್ಯದಿಂದ ಆರಿಸಿದೆ. ಕೃಷ್ಣನು ಕರ್ಣನನ್ನು ತನ್ನ ಕಡೆಗೆ ಸೆಳೆಯಲು ಆತನ ಜನ್ಮ ರಹಸ್ಯವನ್ನು ತಿಳಿಸಿ, ಆತನಿಗೆ ಹಲವು ಬಗೆಯ ಆಮಿಷಗಳನ್ನು ನೀಡುತ್ತಾನೆ. ಆದರೆ ಕರ್ಣನು ಪಾಂಡವರು ತನ್ನ ತಮ್ಮಂದಿರೆಂದು ತಿಳಿದರೂ, ತನ್ನ ಒಡೆಯನಾದ ದುರ್ಯೋಧನನ ಬಗೆಗೆ ಚಿಂತಿಸಿ, ಮುಂದೆ ನಡೆಯುವ ಮಹಾಭಾರತ ಯುದ್ದದಲ್ಲಿ ವೀರಾವೇಶದಿಂದ ಹೋರಾಡುವ ತೀರ್ಮಾನ ಮಾಡುತ್ತಾನೆ.

**(ಉ).ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :**

1. ರವಿಸುತನ ಕಿವಿಯಲಿ ಬಿತ್ತಿದನು ಭಯವ"
2. "ಬಾಯ್ದಂಬುಲಕೆ ಕೈಯಾನುವರೆ"
3. "ಜೀಯ ಹಸಾದವೆಂಬುದು ಕಷ್ಟ"
4. "ನಿನ್ನಪದೆಸೆಯ ಬಯಸುವನಲ್ಲ"
5. "ಮಾರಿಗೌತಣವಾಯ್ತು ನಾಳಿನ ಭಾರತವು"

ಆಯ್ಕೆ:– ಈ ಸಾಲನ್ನು ಕುಮಾರವ್ಯಾಸನ "ಕೌರವೇಂದ್ರನ ಕೊಂದೆ ನೀನು" ಪದ್ಯದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ : ಕೃಷ್ಣನು ಕರ್ಣನನ್ನು ತನ್ನ ಕಡೆಗೆ ಸೆಳೆಯುವ ಸಂದರ್ಭದಲ್ಲಿ ಈ ಮಾತು ಬಂದಿದೆ.
ಸ್ವಾರಸ್ಯ : ಕೃಷ್ಣನ ರಾಜತಂತ್ರ ಮತ್ತು ಕರ್ಣನ ಸ್ವಾಮಿನಿಷ್ಠೆಯನ್ನು ಕಾಣಬಹುದು.

## ಪದ್ಯಪಾಠ – 5 ಹಸುರು

ಲೇಖಕರ ಪರಿಚಯ : ಕುವೆಂಪು

ಕುವೆಂಪುರವರು 1904ರಲ್ಲಿ ಶಿವಮೊಗ್ಗದ ಕುಪ್ಪಳಿಯಲ್ಲಿ ಜನಿಸಿದರು. ಕೊಳಲು, ಪಕ್ಷಿಕಾಶಿ, ಅಮಲನ ಕಥೆ ಕೃತಿಗಳು.ಇವರಿಗೆ ಪಂಪಪ್ರಶಸ್ತಿ, ಜ್ಞಾನಪೀಠಪ್ರಶಸ್ತಿ ರಾಷ್ಟ್ರಕವಿ ಬಿರುದು ಲಭಿಸಿದೆ.

(ಅ).ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

1. ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ?
   ಗಿಳಿಯ ಹಸುರು.
2. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?
   §£z CAZÀ
3. 'ಹಸುರು' ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ?
   ಪ್ರಕೃತಿಯಲ್ಲಿನ ಹಸುರು
4. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ?
   º¸ÀgÀ dªÀSÁ£

ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :

ಹಸುರಾಗಸ; ಹಸುರು ಮುಗಿಲು;
ಹಸುರು ಗದ್ದೆಯಾ ಬಯಲು;
ಹಸುರಿನ ಮಲೆ; ಹಸುರು ಕಣಿವೆ;
ಹಸುರು ಸಂಜೆಯೀ ಬಿಸಿಲೂ!

(ಆ). ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

1. ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ?
2. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?
3. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು?

(ಇ).ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ :

1.'ಹಸುರು' ಕವನದ ರೀತ್ಯ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ.
2.ಪ್ರಕೃತಿಯ ಹಸುರು ಜೀವ ಜಗತ್ತಿಗೆ ಎಷ್ಟು ಮುಖ್ಯ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

(ಈ). ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು

ಈ ಸಾಲುಗಳನ್ನು ಕುವೆಂಪುರವರ "ಹಸುರು" ಪದ್ಯದಿಂದ ಆರಿಸಿದೆ. ಕುವೆಂಪು ಪ್ರಕೃತಿಯಲ್ಲಿ ದೇವರನ್ನು ಕಂಡವರು. ಕವಿಯು ಭತ್ತದ ಗದ್ದೆ, ಬಣ್ಣದ ಗಿಳಿ, ಅಡಕೆಯ ತೋಟ, ಹಸುರು ಆಗಸ, ಹಸುರು ಸಮುದ್ರ, ಹಸುರು ಬೆಟ್ಟ–ಗುಡ್ಡ, ಹಸುರು ಬಿಸಿಲು, ಕಣಿವೆಗಳಲ್ಲಿ ಬರೀ ಹಸುರನ್ನೇ ಕಂಡು ಹಸುರಿನಲ್ಲಿ ಪೂರ್ಣವಾಗಿ ತಲ್ಲೀನವಾಗಿರುವುದು ಈ ಪದ್ಯದಲ್ಲಿ ಮೂಡಿ ಬಂದಿದೆ.

(ಉ).ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :

1. "ಹಸುರಾದುದು ಕವಿಯಾತ್ಮಂ"
2. "ಬೇರೆ ಬಣ್ಣವನೆ ಕಾಣೆ"
3. "ಹಸುರು ಹಸುರಿಳೆಯುಸಿರೂ"
4. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್"

ಆಯ್ಕೆ: ಈ ಸಾಲನ್ನು ಕುವೆಂಪುರವರ "ಹಸುರು" ಪದ್ಯದಿಂದ ಆರಿಸಿದೆ.
ಸಂದರ್ಭ : ಕವಿಯು ಪ್ರಕೃತಿಯ ಹಸುರನ್ನು ನೋಡಿ ವರ್ಣಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.
ಸ್ವಾರಸ್ಯ : ಕವಿಯು ಹಸುರಿನಲ್ಲಿ ತಲ್ಲೀನರಾಗಿರುವುದು ಇಲ್ಲಿ ಸ್ವಾರಸ್ಯ ಪೂರ್ಣವಾಗಿದೆ.

## ಪದ್ಯಭಾಗ–6 ಛಲಮನೆ ಮೆರೆವೆಂ

ಲೇಖಕರ ಪರಿಚಯ : ರನ್ನ

ರನ್ನನು 10ನೇ ಶತಮಾನದಲ್ಲಿ ಮುದುವೊಳಲಿನಲ್ಲಿ ಜನಿಸಿದನು. ಗದಾಯುದ್ಧ , ಪರಶುರಾಮ ಚರಿತೆ ಈತನ ಕಾವ್ಯಗಳು. ಕವಿಚಕ್ರವರ್ತಿ ಇವನಿಗಿರುವ ಬಿರುದು.

(ಅ).ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

1. ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಯಾರಿಗೆ ಹೇಳುವನು?
ಭೀಷ್ಮನಿಗೆ
2. ದಿನಪಸುತ ಎಂದರೆ ಯಾರು? ಕರ್ಣ
3. ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ? ಭೀಮ – ಅರ್ಜುನ
4. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ಯಾರು? ದುರ್ಯೋಧನ.
5. ಅಂತಕಾತ್ಮಜ ಎಂದರೆ ಯಾರು? ಧರ್ಮರಾಯ

(ಆ).ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :

ನೆಲಕಿಱಿವೆನೆಂದು ಬಗೆದಿರೆ
ಚಲಕಿಱಿವೆಂ ಪಾಂಡುಸುತರೊಳೀನೆಲನಿದು ಪಾ
ಟ್ಕೆಲನೆನಗೆ ದಿನಪಸುತನಂ।
ಕೊಲಿಸಿದ ನೆಲನೊಡನೆ ಮತ್ತೆ ಪುದುವಾೞ್ವೆನೇ

(ಇ).ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

1. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ?
2. ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋದನ ಹೇಳುವುದೇಕೆ?
3. ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?

(ಈ).ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ :

1. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.
2. ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

(ಉ). ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು

ಈ ಸಾಲುಗಳನ್ನು ರನ್ನನ "ಛಲಮನೆ ಮೆಱೆವೆಂ " ಪದ್ಯದಿಂದ ಆರಿಸಿದೆ. ದುರ್ಯೋಧನನು ಭೀಷ್ಮರ ಸಲಹೆ ಪಡೆಯಲು ರಣರಂಗಕ್ಕೆ ಬರುತ್ತಾನೆ. ನಾನು ಛಲಕ್ಕಾಗಿ ಹೋರಾಡುತ್ತೇನೆ. ನೆಲಕ್ಕಾಗಿ ಅಲ್ಲ. ನನ್ನ ತಮ್ಮ ಮತ್ತು ಗೆಳೆಯರನ್ನು ಕೊಂದ ಭೀಮ ಅರ್ಜುನರನ್ನು ಕೊಂದು ಆನಂತರ ಧರ್ಮರಾಯನ ಬಳಿ ಸಂಧಿ ಮಾಡಿಕೊಳ್ಳುತ್ತೇನೆ. ಯುದ್ಧದಲ್ಲಿ ಯಾರು ಗೆಲ್ಲುತ್ತಾರೋ ಅವರಿಗೆ ಈ ಸಾಮ್ರಾಜ್ಯ ಸಿಗಲಿದೆ.

(ಊ).ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :

1. "ನೆಲಕಿಱಿವೆನೆಂದು ಬಗೆದಿರೆ ಚಲಕಿಱಿವೆಂ."
2. "ಸಮರದೊಳೆನಗಜ್ಜ ಪೇೞಿಮಾವುದು ಕಜ್ಜಂ."
3. "ಪಾಂಡವರೊಳಿಱಿದು ಛಲಮನೆ ಮೆರೆವೆಂ."
4. "ಮೇಣಾಯ್ತು ಕೌರವಂಗವನಿತಳಂ."

ಆಯ್ಕೆ : ಈ ಸಾಲನ್ನು ರನ್ನನ "ಛಲಮನೆ ಮೆಱೆವೆಂ " ಪದ್ಯದಿಂದ ಆರಿಸಿದೆ.
ಸಂದರ್ಭ : ದುರ್ಯೋಧನನು ರಣರಂಗದಲ್ಲಿ ಭೀಷ್ಮನನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ.
ಸ್ವಾರಸ್ಯ : ದುರ್ಯೋಧನ ಛಲದ ಗುಣ ಇಲ್ಲಿ ಸ್ವಾರಸ್ಯಕರವಾಗಿದೆ.

## ಪದ್ಯಪಾಠ – 7 ವೀರಲವ

ಲೇಖಕರ ಪರಿಚಯ : ಲಕ್ಷ್ಮೀಶ

ಲಕ್ಷ್ಮೀಶನು 16ನೇ ಶತಮಾನದಲ್ಲಿ ದೇವನೂರಿನಲ್ಲಿ ಜನಿಸಿದನು. 'ಜೈಮಿನಿಭಾರತ' ಈತನ ಕಾವ್ಯ. 'ಉಪಮಾಲೋಲ, ಇವನಿಗಿರುವ ಬಿರುದು.

(ಅ).ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

1. ಯಜ್ಞಾಶ್ವವನ್ನು ಕಟ್ಟಿದವರು ಯಾರು?

ಲವ.

2. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?

ಉತ್ತರೀಯ

3. ಮುನಿಸುತರು ಹೆದರಲು ಕಾರಣವೇನು?

ಲವನು ಕುದುರೆಯನ್ನು ಕಟ್ಟಿದ್ದರಿಂದ

ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಿಡಿವರೆಮ್ಮನೆನಲು
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು

(ಆ). ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

1. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.
2. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?
3. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.

(ಇ).ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ :

1. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?
2. ಲವನ ನಡೆವಳಿಕೆ ಮೆಚ್ಚಿಗೆಯಾಯಿತೇ? ಏಕೆ?

(ಈ). ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು

ಈ ಸಾಲನ್ನು ಲಕ್ಷ್ಮೀಶನ "ವೀರಲವ" ಪದ್ಯದಿಂದ ಆರಿಸಿದೆ. ರಾಮನ ಯಾಗದ ಕುದುರೆಯು ಆಶ್ರಮಕ್ಕೆ ನುಗ್ಗಿದ್ದರಿಂದ ಲವನು ಅದನ್ನು ಕಟ್ಟಿ ಹಾಕಿದನು. ರಾಮನ ಅಹಂಕಾರವನ್ನು ಮುರಿಯಲು ಬಯಸಿದನು. ಮುನಿಸುತರು ಹೆದರಿ ಬಿಟ್ಟುಬಿಡು ಎಂದರೂ ಜಾನಕಿಯ ಮಗನಾದ ನಾನು ಬಿಡುವುದಿಲ್ಲ ಎಂದು ಯುದ್ಧಕ್ಕೆ ಸಿದ್ಧನಾದನು.

(ಉ).ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :

1. "ರಘೂದ್ವಹನ ಸೊಲ್ಲೇಳಿ ನಮಿಸಲ್"
2. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"
3. "ಅರಸುಗಳ ವಾಜಿಯಂ ಬಿಡು"
4. "ಜಾನಕಿಯ ಮಗನಿದಕೆ ಬೆದರುವನೆ"

ಆಯ್ಕೆ : ಈ ಸಾಲನ್ನು ಲಕ್ಷ್ಮೀಶನ "ವೀರಲವ" ಪದ್ಯದಿಂದ ಆರಿಸಿದೆ.

ಸಂದರ್ಭ : ಲವನು ಕುದುರೆಯನ್ನು ಕಟ್ಟಿಹಾಕಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ : ಚಿಕ್ಕ ಹುಡುಗನಾದರೂ ಲವನ ವೀರ ಗುಣ ಇಲ್ಲಿ ಸ್ವಾರಸ್ಯಕರವಾಗಿದೆ.

## ಪದ್ಯ –8 ಕೆಮ್ಮನೆ ಮೀಸೆವೊತ್ತೆನೇ

ಕೃತಿಕಾರರ ಪರಿಚಯ

ಪಂಪ :– ಪಂಪನು 10ನೇ ಶತಮಾನದಲ್ಲಿ ವೆಂಗಿಪುಳು ಎಂಬ ಅಗ್ರಹಾರದಲ್ಲಿ ಜನಿಸಿದನು. ಈತನು ಪಂಪಭಾರತ ಹಾಗೂ ಪಂಪಪುರಾಣ ಅಥವಾ ಆದಿಪುರಾಣ ಎಂಬ ಕಾವ್ಯಗಳನ್ನು ರಚಿಸಿದ್ದಾನೆ. ಈತನಿಗೆ ಸರಸ್ವತಿ ಮಣಿಹಾರ, ಸಂಸಾರ ಸಾರೋದಯ, ಎಂಬ ಬಿರುದುಗಳಿವೆ.

**I.** ಒಂದು ವಾಕ್ಯದ ಪ್ರಶ್ನೆಗಳು .

1 . ದ್ರೋಣನು ಪರಶುರಾಮನಲ್ಲಿಗೆ ಏಕೆ ಬಂದನು ?

ದ್ರವ್ಯವನ್ನು ಬೇಡಲು

2. ದ್ರೋಣನು ಯಾರೊಡನೆ ಪರಶುರಾಮನಲ್ಲಿಗೆ ಬಂದನು ?

ತನ್ನ ಮಗನಾದ ಅಶ್ವತ್ಥಾಮನೊಡನೆ

3. ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವುವು?

'ವರುಣ, ವಾಯುವ್ಯ, ಆಗ್ನೇಯ ಹಾಗೂ ಇಂದ್ರಾಸ್ತ್ರ ಗಳನ್ನು ನೀಡಿದನು.

4. ಛತ್ರಾವತಿಯಲ್ಲಿ ಆಳ್ವಿಕೆ ನಡೆಸುತ್ತಿದ್ದ ರಾಜ ಯಾರು ?

ಛತ್ರಾವತಿಯಲ್ಲಿ ರಾಜನಾಗಿದ್ದನು .

5. ದ್ರೋಣನು ಪರಶುರಾಮನ ನಂತರ ದ್ರವ್ಯವನ್ನು ಬೇಡಲು ಯಾರ ಬಳಿಗೆ ಬಂದನು ?

ರಾಜನಾದ ದ್ರುಪದನ ಬಳಿಗೆ

6. ದ್ರುಪದನು ಪಡಿಯರನಿಗೆ ಏನೆಂದು ಹೇಳಿ ಕಳುಹಿಸಿದನು ?

'ದ್ರೋಣನೆಂಬ ಬ್ರಾಹ್ಮಣ ನನಗೆ ಗೊತ್ತಿಲ್ಲ ಎಂದು .

ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :

ಅಂತೆಂಬನಾರ್ಗೆ ಪಿರಿದುಂ
ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ
ಳೆಂತೆನಗೆ ಕೆಳೆಯನೇ ನೂಂ
ಕಂತಪ್ಪನನರಿಯೆನೆಂದು ಸಭೆಯೊಳ್ ನುಡಿದಂ

(ಆ). ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

1. ದ್ರೋಣನು ಪರಶುರಾಮನಲ್ಲಿಗೆ ಹೋಗಲು ಕಾರಣವೇನು ?
2. ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು ?
3. ದ್ರುಪದನು ದ್ರೋಣರಿಗೆ ಗರ್ವದಿಂದ ಹೇಳಿದ ಮಾತುಗಳು ಯಾವುವು
4. ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು ?

(ಇ).ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ :

1. ದ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ ?
2. ದ್ರೋಣನು ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ ?

(ಈ). ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು

1. ದ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ ?
2.ದ್ರೋಣನು ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ ?

ದ್ರೋಣನಿಗೆ ಬಡತನ ಬರಲು ತನ್ನ ಗೆಳೆಯನಾದ ಪರಶುರಾಮನಲ್ಲಿಗೆ ದ್ರವ್ಯ ಬೇಡಲು ಬಂದನು ಆದರೆ ಪರಶುರಾಮ ತಪಸ್ಸಿಗೆ ಹೊರಡಲುಸಿದ್ಧನಾದ ಕಾರಣ ತನ್ನಲ್ಲಿದ್ದ ಆಭರಣ ಹಾಗೂ ಭೂಮಿಯನ್ನು ಬೇರೆಯವರಿಗೆ ದಾನ ಮಾಡಿದ್ದರಿಂದ ಉಳಿದ ಬಿಲ್ಲು ಬಾಣಗಳನ್ನು ದ್ರೋಣನಿಗೆ ದಾನವಾಗಿ ನೀಡಿದನು. ನಂತರ ತನ್ನ ಗೆಳೆಯ ದ್ರುಪದನು ರಾಜನೆಂದು ತಿಳಿದು ಅವನ ಬಳಿ ಸಹಾಯ ಬೇಡಲು ಬಂದಾಗ ದ್ರೋಣನೆಂಬ ಬ್ರಾಹ್ಮಣನನ್ನು ನಾನು ನೋಡಿಯೇ ಇಲ್ಲ ಅವನನ್ನು ಹೊರಗೆನೂಕು ಎಂದು ದ್ರುಪದ ಕಾವಲುಗಾರನಿಗೆ ಹೇಳಿದ ಇದನ್ನು ಕೇಳಿ ಕೋಪಗೊಂಡ ದ್ರೋಣ ಅರಮನೆಯ ಒಳಗೆ ನುಗ್ಗಿ ತನ್ನನ್ನು ಪರಿಚಯಿಸಿದ ಆದರೆ ರಾಜ ಈ ರೀತಿ ನಾಚಿಕೆಗೆಟ್ಟು ಬೇಡುವುದುಸರಿಯೇ ಎಂದು ದ್ರೋಣನನ್ನು ಟೀಕಿಸಿದ.

ಇದರಿಂದ ಕೆರಳಿದ ದ್ರೋಣನು ಅಧಿಕಾರವಿದ್ದಾಗ ಮನಸ್ಸುಹೆಂಡ ಕುಡಿದವರಂತೆ ವರ್ತಿಸುತ್ತಿರುತ್ತದೆ, ಅಹಂಕಾರಿಯಾದ ನಿನ್ನ ಕೈಕಾಲುಗಳನ್ನು ನನ್ನ ಶಿಷ್ಯರಿಂದ ಕಟ್ಟಿಸಿ ನಿನ್ನನ್ನು ಅವಮಾನಿಸದಿದ್ದರೆ ನಾನು ಮೀಸೆ ಬಿಟ್ಟಿದ್ದರೂ ಉಪಯೋಗವೇನು ಎಂದು ದ್ರೋಣನು ಶಪಥಮಾಡಿದ.

## IV .ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ .

1. 'ಈಗಳೊಂದಡಕೆಯುಮಿಲ್ಲ ಕೈಯೊಳ್'
   'ವಿದ್ಯಾಧನಮೆ ಧನಮಪ್ಪುದು'
   'ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆ'

ಆಯ್ಕೆ : ಈವಾಕ್ಯವನ್ನು ಪಂಪನು ಬರೆದ 'ಪಂಪಭಾರತ' ಕಾವ್ಯದ 'ಕೆಮ್ಮನೆ ಮೀಸೆವೊತ್ತನೇ' ಪದ್ಯದಿಂದ ಆರಿಸಿದೆ.

ಸಂದರ್ಭ :ದ್ರೋಣನಿಗೆ ಬಡತನ ಎದುರಾಗಿ , ದ್ರವ್ಯವನ್ನು ಬೇಡಲು ಪರಶುರಾಮನ ಬಳಿಗೆ ಬಂದಾಗ ಪರಶುರಾಮ ಈ ರೀತಿ ಹೇಳುವ ಸಂದರ್ಭ.

ಸ್ವಾರಸ್ಯ : ದ್ರೋಣ ಬಿಲ್ವಿದ್ಯೆಯಲ್ಲಿ ಪ್ರವೀಣನಾದರೂ ಬಡತನದಿಂದಾಗಿ ಬೇಡಲು ಹೋಗಿದ್ದುದು ಸ್ವಾರಸ್ಯಕರವಾಗಿದೆ.

2. 'ಎಂತು ನಾಣಿಲಿಗರಪ್ಪರೆ ಮಾನಸರ್'
   'ಜಲಕ್ಕನೀಗಳರರೆದೆಂ ಸಿರಿ ಕಳ್ತೊಡವುಟ್ಟಿತೆಂಬುದೆಂ'
   'ನೊಳವಿಂಗೆ ಕುಪ್ಪೆ ವರಂ'

ಆಯ್ಕೆ : ಈವಾಕ್ಯವನ್ನು ಪಂಪನು ಬರೆದ 'ಪಂಪಭಾರತ' ಕಾವ್ಯದ 'ಕೆಮ್ಮನೆ ಮೀಸೆವೊತ್ತನೇ' ಪದ್ಯದಿಂದ ಆರಿಸಿದೆ.

ಸಂದರ್ಭ : ಅರಮನೆಯಲ್ಲು ದ್ರುಪದ ಹಾಗೂ ದ್ರೋಣನ ನಡುವೆ ನಡೆಯುವ ಮಾತಿನ ಸಂದರ್ಭ

ಸ್ವಾರಸ್ಯ : ದ್ರೋಣ ಬಿಲ್ವಿದ್ಯೆಯಲ್ಲಿ ಪ್ರವೀಣನಾದರೂ ಬಡತನದಿಂದಾಗಿ ಬೇಡಲು ಹೋಗಿದ್ದುದು ಸ್ವಾರಸ್ಯಕರವಾಗಿದೆ.

# ಪಠ್ಯ ಪೂರಕ ಅಧ್ಯಯನ

## 1 – ಉದಾತ್ತ ಚಿಂತನೆಗಳು

### I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು–ಎರಡು ವಾಕ್ಯಗಳಲ್ಲಿ ಉತ್ತರಿಸಿ.

1. ಕ್ರಿಯಾ ಸ್ವಾತಂತ್ರ್ಯ ಎಂದರೇನು ?

"ತಮಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಇರುವ ಅವಕಾಶವೇ ಕ್ರಿಯಾ ಸ್ವಾತಂತ್ರ್ಯ" ಇದು ಔಪಚಾರಿಕವಾಗಿರದೆ, ವಾಸ್ತವಿಕವಾಗಿದ್ದು, ನಿರ್ದಿಷ್ಟ ಕೆಲಸ ಮಾಡಲು ಇರುವ ಪರಿಣಾಮಕಾರಿಯಾದ ಸಾಮರ್ಥ್ಯವಾಗಿರಬೇಕು.

2. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು ?

ರಾಜಕೀಯ ಸ್ವಾತಂತ್ರ್ಯದಿಂದ ವ್ಯಕ್ತಿ ಶಾಸನ, ಸರಕಾರಗಳನ್ನು ರಚಿಸಿ, ವಿಸರ್ಜಿಸುವ ಹಕ್ಕಿನ ಜೊತೆಗೆ ಜನರಿಂದಲೇ ಅಧಿಕಾರದ ಬಲವನ್ನು ಪಡೆದು, ಆ ಅಧಿಕಾರ ನೀಡಿದವರನ್ನು ರಕ್ಷಿಸುವ ಕರ್ತವ್ಯವೇ ಇದರ ಮಹತ್ವವಾಗಿದೆ.

3. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು ?

"ಕೆಟ್ಟ ಅಕ್ಷರದ ಬರವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ" . ಒಳ್ಳೆಯ ಬರವಣಿಗೆ ಉತ್ತಮ ಶಿಕ್ಷಣದ ಅವಶ್ಯವಾದ ಅಂಶ. ಇದನ್ನು ಪ್ರತಿಯೊಬ್ಬ ಯುವಕ, ಯುವತಿಯೂ ತಿಳಿದುಕೊಳ್ಳಬೇಕು.

4. 'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು ?

'ಅನ್‌ಟು ದಿಸ್ ಲಾಸ್ಟ್' ಎಂಬ ಕೃತಿಯನ್ನು ಓದಿದ ಮೇಲೆ

(1). ಎಲ್ಲರ ಒಳ್ಳೆಯದರಲ್ಲಿಯೇ ನಮ್ಮ ಒಳ್ಳೆಯದು ಅಡಗಿದೆ.

(2). ವಕೀಲನ ಕೆಲಸಕ್ಕೆ ಇರುವ ಬೆಲೆ ಕ್ಷೌರಿಕನ ಕೆಲಸಕ್ಕೂ ಇದೆ.

(3). ಶ್ರಮ ಜೀವನವೇ ಯೋಗ್ಯ ಜೀವನ, ಎಂಬಿತ್ಯಾದಿ ಅಂಶಗಳಿಂದ ಗಾಂಧೀಜಿ ಬದಲಾದರು.

5. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ ?

ದೇಶದ ಜನರಿಗೆ ಕೇವಲ ಜ್ಞಾನವನ್ನು ನೀಡಿದರೆ ದೇಶದ ಪ್ರಗತಿ ಸ್ಥಿರವಾಗದು, ಬದಲಿಗೆ ನಮ್ಮ ದೇಶದ ವೇದ, ಶಾಸ್ತ್ರ, ಸಂಸ್ಕೃತಿಯು ಜನರ ರಕ್ತದಲ್ಲಿ ಹರಿಯಬೇಕು, ಇದರಿಂದ ದೇಶದ ಪ್ರಗತಿ ಸ್ಥಿರವಾಗುತ್ತದೆ ಎಂದಿದ್ದಾರೆ.

6. ಬಾಳಿನಲ್ಲು ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯ ?

ದೇಶ ಮತ್ತು ಇಡೀ ಜಗತ್ತಿನ ಕಲ್ಯಾಣ ನಿಮ್ಮ ಮೇಲಿದೆ ಎಂದು ಭಾವಿಸಿ, ವೇದಾಂತದ ಸಂದೇಶ ವನ್ನು ಪ್ರತಿ ಮನೆಗೂ ಸಾರಿ, ಪ್ರತೀ ಆತ್ಮವನ್ನು ಜಾಗೃತಗೊಳಿಸಲು ಸಿದ್ಧರಾದಾಗ ಮಾತ್ರ ಬಾಳಿನಲ್ಲಿ ತೃಪ್ತಿ ದೊರೆಯುತ್ತದೆ.

## 2. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕರು

### I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು-ಎರಡು ವಾಕ್ಯಗಳಲ್ಲಿ ಉತ್ತರಿಸಿ.

1. ನಾರಾಯಣಗುರು ಧರ್ಮಪರಿಪಾಲನಾ ಯೋಗಂ ಸಂಘಟನೆಯ ಕೊಡುಗೆಗಳನ್ನು ತಿಳಿಸಿ ?

"ಹಿಂದುಳಿದ ಮತ್ತು ಶೋಷಣೆಗೊಳಗಾದ ಸಮುದಾಯಗಳ ಸಬಲೀಕರಣವೇ ಈ ಸಂಘಟನೆಯ ಪ್ರಮುಖ ಕೊಡುಗೆಯಾಗಿದೆ"

2. ನಾರಾಯಣಗುರು ಅವರ ಪ್ರಮುಖ ಆಶಯ ಏನಾಗಿತ್ತು ?

"ಮಾನವ ಕುಲಕ್ಕೆ ಒಂದೇ ಜಾತಿ. ಒಂದೇ ಧರ್ಮ ಮತ್ತು ಒಬ್ಬನೇ ದೇವರು ಎಂಬುದು ಇವರ ಆಶಯ. ಇದನ್ನು ಸಾಧಿಸಲು ಶಿಕ್ಷಣವೇ ಮಾರ್ಗವೆಂದು ಸಾರಿದರು" .

3. ಪೆರಿಯಾರ್ ಚಳವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ ?

ಪೆರಿಯಾರ್ ಚಳವಳಿಯಿಂದ

* ಬ್ರಾಹ್ಮಣೇತರರಿಗೆ ತಮ್ಮ ಜನಸಂಖ್ಯೆ ಅರಿವು ಮೂಡಿತು.
* ಆತ್ಮಗೌರವ ಚಳವಳಿ ಆರಂಭಿಸಿದರು
* ಜಾತಿ, ಲಿಂಗ, ತಾರತಮ್ಯಗಳನ್ನು ವಿರೋಧಿಸಿದರು.
* ಅಸ್ಪೃಶ್ಯರಿಗೆ ದೇವಾಲಯಗಳಿಗೆ ಅವಕಾಶಕ್ಕಾಗಿ ಹೋರಾಡಿದರು.

4. ಪೆರಿಯಾರ್‌ರವರು ಹುಟ್ಟು ಹಾಕಿದ ಸಂಘಟನೆಯ ಹೆಸರೇನು ?

"ದ್ರಾವಿಡ ಕಳಗಂ" ಎಂಬ ಸಂಘಟನೆಯನ್ನು ಪೆರಿಯಾರ್‌ರವರು ಹುಟ್ಟುಹಾಕಿದರು .

==================================================

## 3 – ಭಗತ್ ಸಿಂಗ್

1. ಭಗತ್‌ಸಿಂಗ್‌ನ ಉಪವಾಸಕ್ಕೆ ಕಾರಣ ತಿಳಿಸಿ?
2. ಜಲಿಯನ್‌ವಾಲಾಬಾಗ್‌ನಲ್ಲಿರುವ ಒಕ್ಕಣೆ ಏನು ?
3. ಒಂದೇ ಒಂದು ಗುಂಡೂ ಸಹ ದಂಡವಾಗಲಿಲ್ಲ ಎಂದು ಜನರಲ್ ಡಯರ್ ಹೇಳಲು ಕಾರಣವೇನು ?
4. ಭಗತ್‌ಸಿಂಗ್ ಅಮರನಾದದ್ದು ಹೇಗೆ ?
5. ಭಗತ್‌ಸಿಂಗ್ ಬ್ರಿಟೀಷರ ವಿರುದ್ಧ ಹೋರಾಡಿದ್ದರ ಫಲವೇನು

ಜಲಿಯನ್‌ವಾಲಾಬಾಗ್‌ನ ತ್ಯಾಗದ ಪ್ರತೀಕವಾದ ಮಣ್ಣನ್ನು ಊಟದ ಡಬ್ಬಿಯಲ್ಲಿ ಶೇಖರಿಸಿಕೊಂಡು ಮನೆಗೆ ಬಂದ ಭಗತ್ ರಾತ್ರಿ ಊಟ ಮಾಡದೆ ಮಲಗಿದ. ವಾಲಾಬಾಗ್ ಗೋಡೆಯಲ್ಲಿ ಬರೆದಿದ್ದ "13ನೇ ಏಪ್ರಿಲ್ 1919ರಂದು ಬ್ರಿಟೀಷರ ಗುಂಡಿಗೆ ಆಹುತಿಯಾದ 2000 ಮುಗ್ಧ ಹಿಂದೂ, ಸಿಖ್, ಮುಸಲ್ಮಾನರ ರಕ್ತದಿಂದ ಈ ಪ್ರದೇಶ ಪಾವನವಾಗಿದೆ' ಎಂಬ ಸಾಲುಗಳನ್ನು ಓದಿ,ಭಾರತೀಯರನ್ನುಬಗ್ಗು ಬಡಿಯಲು ಬಂದಿದ್ದ ಡಯರ್ ನಂತಹ ಬ್ರಿಟೀಷರ ವಿರುದ್ಧ ಹೋರಾಡಿ ಮರಣದಂಡನೆ ಹೊಂದಿ ವೀರ ಯೋಧನಾಗಿ ಅಮರನಾದ

## 4 – ವಸಂತ ಮುಖತೋರಲಿಲ್ಲ

1. 'ವಸಂತ ಮುಖ ತೋರಲಿಲ್ಲ' ಪ.ಪೂ.ಅಧ್ಯಯನದಲ್ಲಿ ಪ್ರಕೃತಿಯಸಂಭ್ರಮ ಹೇಗೆ ವ್ಯಕ್ತವಾಗಿದೆ
2. ಪುಟ್ಟ ಪೋರಿಯಲಿಲ್ಲದ ಸಂಭ್ರಮ ಪ್ರಕೃತಿಯಲ್ಲಿ ಹೇಗೆ ವ್ಯಕ್ತವಾಗಿದೆ ?
3. ಪುಟ್ಟ ಪೋರಿ ಮೂಕವಿಸ್ಮಿತಳಾಗಲು ಕಾರಣಗಳೇನು ?
4. ವಸಂತ ಪುಟ್ಟ ಪೋರಿಯ ಗುಡಿಸಲೊಳಗೆ ಬರಲು ಹಿಂಜರಿದದ್ದು ಏಕೆ
5. ಯಾರು-ಯಾರಿಗೆ ವಸಂತ ಮುಖ ತೋರಲಿಲ್ಲ ?
6. ಪುಟ್ಟಿಯ ಪ್ರಶ್ನೆಗಳೇನು ?

ಮೈತುಂಬಿದ ಮಾವಿನ ಮರಗಳು ಮನದುಂಬಿ ಹಾಡುವ ಕೋಗಿಲೆಗಳು ಪ್ರಕೃತಿಯ ಸಂಭ್ರಮಗಳಾಗಿವೆ. ಇವು ಪುಟ್ಟ ಪೋರಿಯಲ್ಲಿ ಇರದ ಸಂಭ್ರಮಗಳು ಏಕೆಂದರೆ ಬೇರೆಯವರ ಮನೆ ಬಾಗಿಲಲ್ಲಿ ಇದ್ದ ಮಾವಿನ ತೋರಣ, ಮಲ್ಲಿಗೆ ಹಾಗೂ ರಂಗೋಲಿಯಲಿದ್ದ ಬಾಲರವಿಯನ್ನು ಕಂಡು ಪುಟ್ಟಿ ಮೂಕವಿಸ್ಮಿತಳಾದಳು.ಹರಿದ ಬಟೆಯುಟ್ಟು ತೂತು ಗುಡಿಸಲಲ್ಲಿರುವ ನನ್ನಂತಹ ಕಮ್ಮಾರ, ಕುಂಬಾರ, ನೇಕಾರ ಹಾಗೂ ಮಾರನಿಗೂ ಮುಖ ತೋರದ ರವಿ ಗುಡಿಸಲೊಳಗೆ ಬರಲು ಹೆದರಿದ ಎಂದು ಯೋಚಿಸಿದಳು.

==================================================

## 5. ಸ್ವದೇಶಿ ಸೂತ್ರದ ಸರಳಹಬ್ಬ

### I. ಒಂದು ವಾಕ್ಯದ ಪ್ರಶ್ನೆಗಳು .

1. ಮಲೆನಾಡಿನಲ್ಲಿ ದೀಪದ ಕುಡಿಯಾಗಿ ಬಳಕೆಯಾಗುತ್ತಿದ್ದ ಗಿಡ ಯಾವುದು ?

ಮಲೆನಾಡಿನಲ್ಲಿ ಕಾಡುಗಿಡದ ಎಲೆಚಿಗುರು ದೀಪದ ಕುಡಿಯಾಗಿ ಬಳಕೆಯಾಗುತ್ತಿತ್ತು.

2. ಪಶ್ಚಿಮ ಘಟ್ಟದ ಕಾಡುಗಳಲ್ಲಿ ಯಾವ ಗಿಡದ ಚಿಗುರನ್ನು ಪೂಜಾರತಿಗೆ ಬಳಸುತ್ತಿದ್ದರು ?

'ಗೊಡಕಲುಕಿಡಿ' ಅಥವಾ 'ತೌಡತ್ತಿ' ಎಂಬ ಗಿಡದ ಚಿಗುರನ್ನು ಬಳಸುತ್ತಿದ್ದರು.

3. 'ಸ್ವದೇಶಿ ಸೂತ್ರದ ಸರಳಹಬ್ಬ' ಪಾಠದ ಲೇಖಕರು ಯಾರು ?

ಶಿವಾನಂದ ಕಳವೆ ಯವರು ಈ ಪಾಠದ ಲೇಖಕರು

### II. ಮೂರು-ನಾಲ್ಕು ವಾಕ್ಯದ ಪ್ರಶ್ನೆಗಳು .

1. ಸ್ವಾತಂತ್ರ್ಯ ಪೂರ್ವದಲ್ಲಿ ಹೋರಾಟಗಾರರು – ಗಿರಾಕಿಗಳು ಮತ್ತು ಅಂಗಡಿಯವರನ್ನು ಏನೆಂದು ವಿನಂತಿಸಿಕೊಂಡರು ?
2. ಯಾವ ಯಾವ ವಸ್ತುಗಳನ್ನು ಬಳಸಬೇಡಿರೆಂದು ಜನಾಂದೋಲನ ಮಾಡಲಾಯಿತು ?

ಹಬ್ಬ ಹರಿದಿನಗಳಿಗೆ ವಿದೇಶಿ ವಸ್ತುಗಳಾದ ಬಣ್ಣದ ಕಾಗದ, ಗಾಜಿನ ಮಣಿಗಳು, ಬೇಗಡಿ,ತುರಾಯಿಗಳು, ಪಟಾಕಿ, ಥಡಾಕಿ, ನೆಲಗುಮ್ಮ, ಕರ್ಪೂರ ಮುಂತಾದವಸ್ತುಗಳನ್ನು ಕೊಳ್ಳದೆ, ನಮ್ಮ ದೇಶೀ ಶುದ್ಧ ಮತ್ತು ಶುಭ್ರ ವಸ್ತುಗಳನ್ನು ಬಳಸಿ ಆಚರಿಸಿ ಎಂದು ವಿನಂತಿಸಿಕೊಳ್ಳುತ್ತಿದ್ದರು.

3. ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು ?

ಮಲೆನಾಡಿನಲ್ಲಿ ಬೆಳೆಯುವ ನಾಗಸಂಪಿಗೆ ಬೀಜಗಳನ್ನು ಕುಟ್ಟಿ , ಚಿಕ್ಕ ಚಿಕ್ಕ ಉಂಡೆಗಳನ್ನಾಗಿ ಕಟ್ಟಿ ದೀಪಾವಳಿ ಹಾಗೂ ಕಾರ್ತಿಕ ಮಾಸಗಳಲ್ಲಿ ಅದರಿಂದ ದೀಪಗಳನ್ನು ಉರಿಸಲಾಗುತ್ತಿತ್ತು.

4. ಆಗ ಕರ್ಪೂರಕ್ಕೆ ಕಾದಾಡಿದ ಮನಸ್ಸುಗಳು ಮರುಗಿವೆ-ಏಕೆ ?

ಏಕೆಂದರೆ ಸರಳ ಬದುಕು ಆದರ್ಶವಾಗಿದ್ದ ನೆಲದಲ್ಲಿ ಇಂದು ಆಡಂಬರ , ರಂಗು , ನಾಟಕೀಯತೆ ಸೇರಿಕೊಂಡು ಬದುಕು ಲಗಾಮಿಲ್ಲದೆ ಓಟಕಿತ್ತಿದೆ. ಹಬ್ಬಗಳ ಆಚರಣೆಯ ನೆಪದಲ್ಲಿ ಖರೀದಿ ವಿಜೃಂಭಿಸಿದೆ ಹೀಗಾಗಿ ಆಗ ಕರ್ಪೂರಕ್ಕೆ ಕಾದಾಡಿದ ಮನಸ್ಸುಗಳು ಇಂದು ಮರುಗಿವೆ.

5. ಸ್ವದೇಶಿ ಆರ್ಥಿಕತೆ ಬಲಪಡಿಸಲು ಹಬ್ಬಗಳಲ್ಲಿ ಸ್ವದೇಶಿ ವಸ್ತುಗಳನ್ನೇ ಬಳಸಲು ಪ್ರಾರಂಭಿಸಬೇಕು– ಈ ಕುರಿತು ನಿಮ್ಮ ಅಭಿಪ್ರಾಯವೇನು ?

ಹಬ್ಬಗಳ ಸಮಯದಲ್ಲಿ ವಿದೇಶಿ ವಸ್ತುಗಳನ್ನು ಕೊಳ್ಳುವುದರಿಂದ ಆದಾಯ ಪರದೇಗಳಿಗೆ ಹೋಗುತ್ತದೆ ಸ್ವದೇಸದಲ್ಲಿ ತಯಾರಾಗುವ ವಸ್ತುಗಳಿಗೆ ಬೆಲೆ ಸಿಗದೆ ನಷ್ಟ ಅನುಭವಿಸಿ, ಬದುಕು ಅತಂತ್ರವಾಗುವ ಸ್ಥಿತಿಗೆ ಬಂದಿದೆ. ಹಾಗಾಗಿ ಸ್ವದೇಶಿ ವಸ್ತುಗಳನ್ನೇ ಖರೀದಿಸಿದರೆ ಆರ್ಥಿಕತೆಗೆ ಅನುಕೂಲವಾಗಿ ಉದ್ಯೋಗಗಳು ಹೆಚ್ಚುತ್ತವೆ.

===========================================================

## 6. ನಾನು ಪ್ರಾಸ ಬಿಟ್ಟ ಕತೆ

### I. ಒಂದು ವಾಕ್ಯದ ಪ್ರಶ್ನೆಗಳು .

1. ಪೈಗಳು ಬರೆದ ಮೊದಲ ಯಕ್ಷಗಾನ ಪ್ರಸಂಗದ ಹೆಸರೇನು ?
   'ಮಕರಾಕ್ಷಸನ ಕಾಳಗ'
2. ಬಾಸೆಲ್ ಮಿಶನ್‌ನವರು ಪ್ರಕಟಿಸಿದ್ದ ಯಾವ ಕೃತಿಗಳನ್ನು ಲೇಖಕರು ಓದಿಕೊಂಡರು ?
   ಕನ್ನಡ ಜೈಮಿನಿ ಭಾರತ, ಗದುಗಿನ ಭಾರತ, ಶಬರ ಶಂಕರವಿಲಾಸ ಕೃತಿಗಳು
3. 'ಬಿಲ್ಲಹಬ್ಬ'ವನ್ನು ರಚಿಸಿದ ಕವಿ ಯಾರು ?
   'ಮೂಲ್ಕಿ ವಾಸುದೇವ ಪ್ರಭು'
4. ಪ್ರಾಸ ಬಿಡಬೇಕೆಂದು ನಿರ್ಧರಿಸಿದ ಬಳಿಕ ಪೈಗಳು ಯಾವ ಕೃತಿಗಳನ್ನು ಬರೆದರು ?
   'ಕಾಲಿಯ ಮರ್ಧನ'
5. ಪ್ರಾಸರಹಿತವಾದ ಕವಿತೆಗಳು ಮೊದಲ ಬಾರಿಗೆ ಯಾವ ಪತ್ರಿಕೆಯಲ್ಲಿ ಪ್ರಕಟವಾದವು ?
   'ಸ್ವದೇಶಾಭಿಮಾನಿ'

### II. ಮೂರು–ನಾಲ್ಕು ವಾಕ್ಯದ ಪ್ರಶ್ನೆಗಳು .

1. ಪೈಗಳ ತಮ್ಮನ ನೂಲು ಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು ?

ಒಂದು ಕಡೆಯಲ್ಲಿ ಒಡ್ಡುಗೆಗಳನ್ನು ಕಟ್ಟುತ್ತಾರೆ, ಮತ್ತೊಂದು ಕಡೆ ಮಂಡಿಗೆಗಳನ್ನು ಮಡಚುತ್ತಾರೆ, ಮತ್ತೊಂದು ಕಡೆ ಸೇವಿಗೆಯನ್ನು ಒತ್ತುತ್ತಾರೆ ಹೀಗೆ ಮದುವೆಯ ದಿನ ಅಂಗಳದಲ್ಲಿಸಿದ್ಧತೆಗಳುನಡೆದಿದ್ದವು.

2. ಹಾಡು ಕಿವಿಗೆ ಬಿದ್ದಾಗ ಪೈಗಳು ಏನು ಮಾಡಿದರು ?

ಹಾಡು ಕಿವಿಗೆ ಬಿದ್ದಾಗ ಪೈಗಳು ನೆಟ್ಟಗಿ ಹೋಗಿ ಅಭ್ಯಾಸದ ಪುಸ್ತಕ ಹಿಡಿದು ಇಳೀಹೊತ್ತಿನವರೆಗೆ ಒಂದು ನಾಟಕವನ್ನು ಬರೆದು ಮುಗಿಸಿದರು.

3. ಮುದ್ದಣ ಕವಿ ಲೇಖಕರಿಗೆ ಏನೆಂದು ಸಲಹೆ ಕೊಟ್ಟರು ?

1899ರಲ್ಲಿ ಶೇಕ್ಸ್ಪಿಯರ್‌ರವರ 'ಟ್ವೆಲ್ಸ್‌ನೈಟ್' ಎಂಬ ನಾಟಕದ ಕೆಲವು ಅಂಕಗಳನ್ನು ಕನ್ನಡಿಸಿ ಮುದ್ದಣನವರಿಗೆ ಕೊಟ್ಟಾಗ ಅವರು ಈ ಕೆಲಸವನ್ನು ಮುಂದುವರಿಸು ಎಂದು ಹೇಳಿದರು.

## 7. ತಾಯಿ ಭಾರತೀಯ ಅಮರಪುತ್ರರು

### I. ಒಂದು ವಾಕ್ಯದ ಪ್ರಶ್ನೆಗಳು .

1. 'ಪೂರ್ಣ ಸ್ವರಾಜ್ಯ'ದ ಪರಿಕಲ್ಪನೆಯನ್ನು ಪ್ರತಿಪಾದಿಸಿದ ಕ್ರಾಂತಿಕಾರಿ ಯಾರು ?
   'ಭಗತ್‌ಸಿಂಗ್' ಪ್ರತಿಪಾದಿಸಿದರು
2. ಭಗತ್‌ಸಿಂಗ್‌ನ ಸಹಚರರು ಯಾರು ?
   'ರಾಜಗುರು, ಸುಖದೇವ, ಭಟುಕೇಶ್ವರ ದತ್ತ' ಇವರು ಭಗತ್‌ಸಿಂಗ್‌ನ ಸಹಚರರು.
3. ಮೂವರು ಕ್ರಾಂತಿಕಾರಿಗಳನ್ನು ಗಲ್ಲಿಗೇರಿಸಲು ಬ್ರಿಟಿಷರು ಕೊಟ್ಟ ಕಾರಣ ಏನು ?
   'ರಾಜ ದ್ರೋಹಿಗಳು' ಎಂಬ ಕಾರಣವನ್ನು ಕೊಟ್ಟರು.
4. 'ನನಗೆ ಹೊಡೆದ ಒಂದೊಂದು ಲಾಠಿ ಏಟು ಬ್ರಿಟೀಷರ ಶವಪೆಟ್ಟಿಗೆಗೆ ಹೊಡದ ಕೊನೆಯಮೊಳೆಗಳು' ಎಂದು ಹೇಳಿದವರು ಯಾರು ?
   'ಲಾಲಾ ಲಜಪತ್‌ರಾಯರು ಈ ಮಾತನ್ನು ಹೇಳಿದರು'.
5. ಮೂವರು ಕ್ರಾಂತಿಕಾರಿಗಳನ್ನು ಗಲ್ಲಿಗೇರಿಸಿದ ದಿನ ಯಾವುದು ?
   '23ನೇ ಮಾರ್ಚ್ 1931' ರಂದು ಗಲ್ಲಿಗೇರಿಸಿದರು.

### II. ಮೂರು–ನಾಲ್ಕು ವಾಕ್ಯದ ಪ್ರಶ್ನೆಗಳು .

1. ಲಾಲಾ ಲಜಪತರಾಯರು ಲಾಠಿಯೇಟಿನಿಂದ ತೀರಿಕೊಳ್ಳುವ ಸಮಯದಲ್ಲಿ ಏನು ಹೇಳಿದರು ?
   'ನನಗೆ ಹೊಡೆದ ಒಂದೊಂದು ಲಾಠಿ ಏಟು ಬ್ರಿಟೀಷರ ಶವಪೆಟ್ಟಿಗೆಗೆ ಹೊಡದ ಕೊನೆಯ ಮೊಳೆಗಳು' ಎಂದು ಹೇಳಿದರು.
2. ಚಂದ್ರಶೇಖರ ಆಜಾದರು ಜೈಲಿನಿಂದ ತಪ್ಪಿಸಿಕೊಳ್ಳುವ ಕುರುತು ಹೇಳಿದಾಗ ಭಗತ್‌ಸಿಂಗ್ ಹೇಳಿದ ಮಾತೇನು ?
   'ನೇಣಿಗೇರುವುದರಿಂದ ಭಾರತೀಯರಿಗೆ ಹೆಚ್ಚು ಪ್ರೇರಣೆ ನೀಡಿದಂತಾಗುತ್ತದೆ' ಎಂದು ಭಗತ್ ಸಿಂಗ್ ಹೇಳಿದರು. ಅದರಂತೆಯೇ ಲಕ್ಷಾಂತರ ಭಾರತೀಯರು ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದರು.
3. ಕ್ರಾಂತಿಕಾರಿಗಳ ಪಾದಾರ್ಪಣೆ ಮುಂದಿನ ದಿನಗಳಲ್ಲಿ ಭಾರತೀಯರಿಗೆ ಯಾವ ಬಗೆಯಲ್ಲಿ ಪ್ರೇರಣೆ ಕೊಟ್ಟಿತು ?

ಕ್ರಾಂತಿಕಾರಿಗಳ ಪಾದಾರ್ಪಣೆಯಿಂದಾಗಿ ಯುವಕರಲ್ಲಿ ಕ್ರಾಂತಿಯ ಕಿಚ್ಚು ಮೂಡಿ, ಕ್ರಾಂತಿ ಸಂಘಟನೆಯಲ್ಲಿ ಬಲುದೊಡ್ಡ ಶಕ್ತಿ ತುಂಬಿತು.ಭಗತ್‌ಸಿಂಗ್ ಬಲಿದಾನವನ್ನು ಭೋಸರು ತಮ್ಮ ಸೇನೆಯ ಪ್ರೇರಣೆಗೆಂದು ಬಳಸಿಕೊಳ್ಳುತ್ತಿದ್ದರು. ಇದರಿಂದಾಗಿ ಬ್ರಿಟೀಷರು ಹೆದರಲಾರಂಭಿಸಿದರು.

## ಅಪಠಿತ ಗದ್ಯಭಾಗ (ಮಾದರಿ–1)

**ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

1.ಗದಾಧರನು ಬಂಗಾಲ ಪ್ರಾಂತದ ಹೂಗ್ಲಿ ಜಿಲ್ಲೆಯಲ್ಲಿನ ಕಾಮಾರ ಪುಕುರ ಎಂಬ ಸಣ್ಣ ಹಳ್ಳಿಯಲ್ಲಿ ಖುದಿರಾಮ ಮತ್ತು ಚಂದ್ರಮಣಿ ದೇವಿ ಇವರ ಮಗನಾಗಿ ಹುಟ್ಟಿದನು. ಕ್ರಿ.ಶ. 1836 ಫೆಬ್ರವರಿ 18ನೆಯ ದಿನಾಂಕದ ಪಾಲ್ಗುಣ ಮಾಸದಲ್ಲಿ, ಹುಲ್ಲು ಜೋಪಡಿಯ ಮನೆಯಲ್ಲಿ, ಜನ್ಮವನ್ನು ಎತ್ತಿದನು. ಜೋಯಿಸರು ಬಂದು, ಜನ್ಮ ಕುಂಡಲಿಯನ್ನು ಬರೆದು. "ಇಂಥವನು ಧರ್ಮವೇತ್ತನೂ, ಮಹನೀಯನೂ ಆಗುವನು, ಬಹುಶಿಷ್ಯ ಪರಿವೃತನಾಗಿ, ದೇವ ಮಂದಿರದಲ್ಲಿ ವಾಸ ಮಾಡುವನು. ನಾರಾಯಣಾಂಶ ಸಂಭೂತನಾದ ಮಹಾಪುರುಷನೆಂದು ಪೂಜಿತನಾಗುವನು" ಎಂದು ಭವಿಷ್ಯವನ್ನು ಹೇಳಿದರು. ಅನಂತರ ಜಾತಕರ್ಮವನ್ನು ನೇರವೇರಿಸಿ, ಶಿಶುವಿಗೆ 'ಗದಾಧರ' ಎಂದು ನಾಮಕರಣ ಮಾಡಿದರು. ಒಮ್ಮೆ ತಾಯಿ ಚಂದ್ರಮಣಿ ದೇವಿಯು ಶಿಶುವನ್ನು ಎತ್ತಿಕೊಳ್ಳಲು ಹೋಗಿ, ತುಂಬಾ ಭಾರ ಎನಿಸಿ, ಎತ್ತಿಕೊಳ್ಳಲಾರದೆ ಗಂಡನನ್ನು ಕರೆದಳು. ಆದರೆ ಬಂದು ಮತ್ತೆ ಎತ್ತಿಕೊಂಡಾಗ ಹೂವಿನಂತೆ ಹಗುರವಾಗಿತ್ತು. ಇನ್ನೊಮ್ಮೆ ಗದಾಧರನು ಎಂಟು ತಿಂಗಳ ಮಗುವಾಗಿದ್ದಾಗ ಹಾಸಿಗೆಯ ಮೇಲೆ ಮಲಗಿಸಿದ್ದ ಕಂದನಿಗೆ ಬದಲಾಗಿ, ತೇಜಸ್ವಿಯಾದ ದೊಡ್ಡ ಮನುಷ್ಯನು ಇದ್ದುದ್ದನ್ನು ಕಂಡು ತಾಯಿ ಕಿಟ್ಟನೆ ಕಿರುಚಿದಳು. ಪತಿಯು ಓಡಿಬಂದು ನೋಡಿದಾಗ ಮಗುವು ಮೊದಲಿನಂತೆಯೇ ಶಿಶುವಾಗಿ ಮಲಗಿತ್ತು. ಪತಿ ಖುದಿರಾಮನು ದೇವಾಂಶ ಶಿಶುವಿನ ವಿಚಾರದಲ್ಲಿ ಹೀಗೆಲ್ಲ ದಿವ್ಯಾನುಭವಗಳು ಆಗುವುದು ಸಹಜ, ಆತಂಕ ಬೇಡ ಎಂದು ಸತಿಗೆ ಸಮಾಧಾನವನ್ನು ಮಾಡಿದನು. ಈ ಅಸಾಮಾನ್ಯ ಗದಾಧರನೇ ಮುಂದೆ "ಶ್ರೀರಾಮಕೃಷ್ಣ ಪರಮಹಂಸ' ಎಂದು ಲೋಕಪ್ರಸಿದ್ಧನಾದನು.

**ಪ್ರಶ್ನೆಗಳು :**

ಅ)ಗದಾಧರನ ಬಗ್ಗೆ ಜೋಯಿಸರು ಏನೆಂದು ಭವಿಷ್ಯ ನುಡಿದರು ?

ಬ) ತಾಯಿ ಚಂದ್ರಮಣಿ ದೇವಿಗೆ ಮಗ ಗದಾಧರನ ವಿಷಯದಲ್ಲಿ ಆದ ದಿವ್ಯಾನುಭವಗಳೇನು ?

==========================================================

## ಅಪಠಿತ ಗದ್ಯಭಾಗ (ಮಾದರಿ–2)

**ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

2.ವಿದುರನೀತಿಯು ಮಹಾಭಾರತದ ಅತ್ಯಂತ ಉದ್ಬೋಧಕವಾದ ಒಂದು ಪ್ರಸಂಗ. ಇದರಲ್ಲಿ ವಿದುರನು ಧೃತರಾಷ್ಟ್ರನನ್ನು ಉದ್ದೇಶಿಸಿ ಇಹ–ಪರಗಳೆರಡಕ್ಕೂ ಕಲ್ಯಾಣವನ್ನುಂಟು ಮಾಡಬಲ್ಲ ಅನೇಕ ಸಂಗತಿಗಳ ಬಗ್ಗೆ ತಿಳಿಸಿಕೊಡುತ್ತಾನೆ. ಮಹಾಭಾರತದ ಉದ್ಯೋಗ ಪರ್ವದಲ್ಲಿರುವ ವಿದುರನೀತಿಯಲ್ಲಿ ವ್ಯವಹಾರ, ಮಾತು, ನೀತಿ, ಸದಾಚಾರ, ಧರ್ಮ, ಸುಖ–ದುಃಖಗಳು ಪ್ರಾಪ್ತವಾಗುವ ಬಗೆಯನ್ನು ತಿಳಿಸಲಾಗಿದೆ. ಅಲ್ಲದೆ ಕರ್ಮದ ನಿರ್ಣಯ, ತ್ಯಾಗದ ಮಹಿಮೆ, ನ್ಯಾಯದ ಸ್ವರೂಪ, ಸತ್ಯದ ಬಗ್ಗೆಯೂ ತಿಳಿಸಲಾಗಿದೆ. ಮುಂದುವರೆದು ಪರೋಪಕಾರ, ಕ್ಷಮೆ, ಅಹಿಂಸೆ, ಮಿತ್ರನ ಲಕ್ಷಣ, ಕೃತಘ್ನನಿಗೆ ಉಂಟಾಗುವ ದುರ್ದೆಸೆ ಮುಂತಾದವುಗಳ ಬಗ್ಗೆ ವರ್ಣನೆಯಿದೆ. ಈ ವರ್ಣನೆಯೊಂದಿಗೆ ರಾಜಧರ್ಮದ ಸುಂದರವಾದ ನಿರೂಪಣೆಯನ್ನು ಕೊಡಲಾಗಿದೆ. ವಿದುರನೀತಿಯ ಒಂದು ಶ್ಲೋಕದ ಅರ್ಥ ಹೀಗಿದೆ. "ಮುಪ್ಪು ರೂಪವನ್ನು, ಆಸೆಯು ಧೈರ್ಯವನ್ನು, ಮೃತ್ಯುವು ಪ್ರಾಣಗಳನ್ನು, ಅಸೂಯೆಯು ಧರ್ಮಾಚರಣೆಯನ್ನು, ಕಾಮವು ಲಜ್ಜೆಯನ್ನು, ನೀಚ ಮನುಷ್ಯರ ಸೇವೆಯು ಮನುಷ್ಯರ ಚಾರಿತ್ರ್ಯವನ್ನು, ಕೋಪವು ಸಂಪತ್ತನ್ನು ವಿನಾಶಗೊಳಿಸುತ್ತದೆ. ದುರಭಿಮಾನ ಅಥವಾ ದುರಹಂಕಾರವು ಮಾನವನ ಸರ್ವಸ್ವವನ್ನೂ ವಿನಾಶಗೊಳಿಸುತ್ತದೆ." ಶುದ್ಧ ಹಾಗೂ ಸುಖಮಯ ಜೀವನವನ್ನು ನಡೆಸಲು ಬಯಸುವ ವಿದ್ವಾಂಸ, ತರುಣ, ವೃದ್ಧ, ಬಾಲಕ, ಮಹಿಳೆ, ಶಾಸಕ, ಪ್ರಜೆ, ಧನಿಕ, ದರಿದ್ರ, ವಿದ್ಯಾರ್ಥಿ, ಶಿಕ್ಷಕ, ಸೇವಾವ್ರತೀ ಎಲ್ಲರಿಗೂ ವಿದುರನೀತಿಯ ಶ್ಲೋಕಗಳು ಅತ್ಯಂತ ಪ್ರಯೋಜನಕಾರಿಯಾಗಿವೆ.

**ಪ್ರಶ್ನೆಗಳು :**

ಅ) ವಿದುರನೀತಿಯಲ್ಲಿ ಯಾವ ಯಾವ ವಿಷಯಗಳಬಗ್ಗೆ ನಿರೂಪಿಸಲಾಗಿದೆ?

ಬ) ವಿದುರನೀತಿಯ ಶ್ಲೋಕದಲ್ಲಿ ತಿಳಿಸಿರುವಂತೆ ವಿನಾಶಕ್ಕೆ ಕಾರಣವಾಗುವ ಅಂಶಗಳಾವುವು?

## ಅಪಠಿತ ಗದ್ಯಭಾಗ (ಮಾದರಿ–3)

**ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಬರೆಯಿರಿ**

3. ಆಲೂರು ವೆಂಕಟರಾಯರು ಅಖಂಡ ಕರ್ನಾಟಕದ ಕನಸನ್ನು ನನಸಾಗಿಸಲು ಹೋರಾಟ ನಡೆಸುತ್ತಾ ಸ್ವಾತಂತ್ರ್ಯ ಚಳುವಳಿಯಲ್ಲೂ ಭಾಗವಹಿಸಿದ್ದರು. "ಭಾರತವನ್ನು ಬಿಟ್ಟು ಕರ್ನಾಟಕವಿಲ್ಲ;ಕರ್ನಾಟಕವನ್ನು ಬಿಟ್ಟು ಭಾರತವಿಲ್ಲ" ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಸ್ವದೇಶಿ ವಸ್ತುಗಳ ಮೌಲ್ಯವನ್ನು ಹೆಚ್ಚಿಸಲು "ವಿದೇಶಿ ವಸ್ತುಗಳ ಬಹಿಷ್ಕಾರ ; ಸ್ವದೇಶಿ ವಸ್ತುಗಳ ಪುರಸ್ಕಾರ" ಚಳುವಳಿಯಲ್ಲಿ ದುಮುಕಿ ಮಂಗಳೂರು ಹೆಂಚು ಮತ್ತು ಸೀಸದ ಕಡ್ಡಿ ತಯಾರಿಸುವ ಕಾರ್ಖಾನೆಗಳ ಸ್ಥಾಪನೆಗೆ ಜನರನ್ನು ಹುರಿದುಂಬಿಸಿದರಲ್ಲದೆ ತಾವೂ ಸ್ಥಾಪಿಸಿ ಮಾದರಿಯಾದರು. ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಶಿಕ್ಷಣದ ಪಾತ್ರ ದೊಡ್ಡದು ಆದರೆ ಭಾರತೀಯರು ಪಡೆಯುತ್ತಿದ್ದ ಶಿಕ್ಷಣ ಅವರಿಗೆ ಸ್ವದೇಶವನ್ನೂ , ಸ್ವದೇಶ ಸಂಸ್ಕೃತಿಯನ್ನೂ ಮರೆಸುತ್ತಲಿದ್ದಿತು. ಈ ಅಪಾಯವನ್ನು ತಪ್ಪಿಸಲು ನಮ್ಮ ದೇಶ, ನಮ್ಮ ಸಂಸ್ಕೃತಿಗಳನ್ನು ಪೋಷಿಸುವ "ರಾಷ್ಟ್ರೀಯ ಶಿಕ್ಷಣ ಚಳವಳಿಯು' ಆಗ ಭಾರತದಲ್ಲೆಲ್ಲಾ ವ್ಯಾಪಿಸಿದ್ದಿತು. ವೆಂಕಟರಾಯರು ಈ ಚಳವಳಿಯಲ್ಲೂ ಧುಮುಕಿ ಧಾರವಾಡದಲ್ಲಿ 'ಕರ್ನಾಟಕ ನೂತನ ವಿದ್ಯಾಲಯ' ಎಂಬ ರಾಷ್ಟ್ರೀಯ ವಿದ್ಯಾಲಯವನ್ನೂ ಸ್ಥಾಪಿಸಿದರು.

**ಪ್ರಶ್ನೆಗಳು :**

43. ಅ). ಆಲೂರು ವೆಂಕಟರಾಯರು ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಲು ಕಾರಣವೇನು ?

43. ಬ). ಆಲೂರು ವೆಂಕಟರಾಯರ ಸ್ಪಷ್ಟ ನಿಲುವು ಏನಾಗಿತ್ತು ?

==========================================================

## ಅಪಠಿತ ಗದ್ಯಭಾಗ (ಮಾದರಿ–4)

**ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಬರೆಯಿರಿ**

4. ಭಾರತವು ವಿವಿಧ ಧರ್ಮ, ಭಾಷೆ, ಬುಡಕಟ್ಟು, ಜನಾಂಗಗಳನ್ನೂ ಹೊಂದಿದ್ದು ವೈವಿಧ್ಯತೆಯಿಂದ ಕೂಡಿದೆ. ದೇಶದ ಎಲ್ಲಾ ಭಾಗಗಳಲ್ಲಿಯೂ ಸಾಂಸ್ಕೃತಿಕ ಮತ್ತು ಜೀವನ ಮಾರ್ಗದ ಒಗ್ಗಟ್ಟು ಹಾಗೂ ದೃಷ್ಟಿಕೋನವು ವೈವಿಧ್ಯತೆ ಹೊಂದಿದ್ದರೂ ನಾವು ಭಾರತೀಯರು ಎಂಬ ಏಕತಾ ಭಾವ ನಮ್ಮಲ್ಲಿ ಬಲವಾಗಿ ಬೇರೂರಿದೆ. ನಮ್ಮ ದೇಶದ ರಾಷ್ಟ್ರಗೀತೆ, ರಾಷ್ಟ್ರಭಾಷೆ, ರಾಷ್ಟ್ರ ಮುದ್ರೆ ಇವು ಏಕತೆಯ ಸಂಕೇತಗಳಾಗಿವೆ. ಇಡೀ ದೇಶವೇ ವೈವಿಧ್ಯಮಯ ಸಾಂಸ್ಕೃತಿಕ ಆಚರಣೆಯಿಂದ ಒಂದೇ ಮನೆಯವರಂತೆ ಕೂಡಿ ಬಾಳುತ್ತಿರುವುದು ಜಗತ್ತಿಗೆ ಮಾದರಿಯಾಗಿದೆ. ಇತ್ತೀಚೆಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿಯ ಗಾಳಿಯು ವಿಶ್ವವನ್ನೇ ನಡುಗಿಸುತ್ತಿದೆ. ಆದರೆ ಭಾರತೀಯರಾದ ನಾವು ಇಂತಹ ಪ್ರವಾಹಗಳಿಗೆ ಜಗ್ಗುತ್ತಿಲ್ಲ.

**ಪ್ರಶ್ನೆಗಳು :**

43. ಅ). ಇಂದು ವಿಶ್ವವನ್ನೇ ನಡುಗಿಸುತ್ತಿರುವ ಅಭಿವೃದ್ಧಿಯ ಅಂಶಗಳಾವುವು ?

43. ಬ). ನಮ್ಮ ದೇಶದ ಏಕತೆಯ ಸಂಕೇತಗಳಾವುವು ?

## ಅಪಠಿತ ಗದ್ಯಭಾಗ (ಮಾದರಿ–5)

**ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಬರೆಯಿರಿ**

5. "ನಡತೆ ಅಥವಾ ಚಾರಿತ್ರ್ಯ ಎಂದರೆ ಸಂಪೂರ್ಣವಾಗಿ ರೂಪುಗೊಂಡ ಇಚ್ಛಾ ಶಕ್ತಿ" ಎಂಬುದು ಜಾನ್ ಸ್ಟೂಯರ್ಟ್ ಮಿಲ್ ಮಹಾಶಯ ನೀಡಿದ ನಿರೂಪಣೆ. ಇಚ್ಛಾ ಶಕ್ತಿ ಎಂದರೆ ಕಾರ್ಯಪ್ರೇರಕವಾದ ಅನಿಸಿಕೆಗಳ ಒಟ್ಟು ಮೊತ್ತ. ಅವು ನಿಶ್ಚಿತ, ನಿಯಮಿತ, ರಚನಾತ್ಮಕ ರೀತಿಯಲ್ಲಿ ವ್ಯಕ್ತವಾದರೆ ಅಂಥ ವ್ಯಕ್ತಿಯ ಚಾರಿತ್ರ್ಯ ದೃಢವಾಗಿಎ ಎಂದರ್ಥ. "ಯಾರನ್ನೂ ಅಪ್ರಯೋಜಕ ವ್ಯಕ್ತಿ ಎನ್ನಬೇಡಿ. ಏಕೆಂದರೆ ಆತನೊಂದು ಚಾರಿತ್ರ್ಯವನ್ನು ಪ್ರತಿನಿಧಿಸುತ್ತಾನೆ. ಎಂದರೆ ತಾನು ಒಂದು ತೆರನಾದ ಅಭ್ಯಾಸಗಳ ಮೂಟೆ ಎಂಬುದನ್ನು ಸೂಚಿಸುತ್ತಾನೆ. ಹಳೆಯ ಅಭ್ಯಾಸಗಳನ್ನು ನೂತನ ಉಪಯುಕ್ತ ಅಭ್ಯಾಗಳಿಂದ ಗೆಲ್ಲಬಹುದು . ನಡತೆ ಎಂದರೆ ಪುನರಾವರ್ತಿತ ಕ್ರಿಯೆಗಳ ಮೂಲಕವೆ ನಡತೆಯಲ್ಲಿ ಸುಧಾರಣೆಗಳಾಗಬೇಕು" ಎಂದರು ಸ್ವಾಮಿ ವಿವೇಕಾನಂದರು.

**ಪ್ರಶ್ನೆಗಳು :**

43. ಅ). 'ನಡತೆ'ಯಲ್ಲಿನ ಸುಧಾರಣೆಗಳ ಬಗ್ಗೆ ಸ್ವಾಮಿ ವಿವೇಕಾನಂದರ ಅಭಿಪ್ರಾಯವೇನು ?

43. ಬ). ಚಾರಿತ್ರ್ಯದ ಬಗ್ಗೆ 'ಜಾನ್ ಸ್ಟೂಯರ್ಟ್ ಮಿಲ್' ನೀಡಿದ ಹೇಳಿಕೆಯನ್ನು ವಿವರಿಸಿ.

============================================================

## ಛಂದಸ್ಸಿನ ಮಾದರಿಗಳು ಅಭ್ಯಾಸಕ್ಕಾಗಿ

**VI.** ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣವಿಂಗಡಿಸಿ ಛಂದಸ್ಸಿನಹೆಸರು ಬರೆಯಿರಿ . **(1x3=3)**

### ವೃತ್ತ ಛಂದಸ್ಸು /ಖ್ಯಾತ ಕರ್ಣಾಟಕ/ಅಕ್ಷರ ಗಣ/ವರ್ಣಗಣ

### ಉತ್ಪಲಮಾಲಾ ವೃತ್ತ

1. ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋ ವಿಭಾಗಮಾ

| ಭ | ರ | ನ | ಭ | ಭ | ರ | ಲ ಗು |
|---|---|---|---|---|---|---|
| –U U | – U – | UUU | – UU | – U U | – U – | U – |
| ಮೇದಿನಿ | ಯಂಕ್ರಮ | ಕ್ರಮದೆ | ಪರ್ವಿದು | ದಾತ್ತನ | ಭೋವಿಭಾ | ಗ ಮಾ |

= ಒಟ್ಟು 20 ಅಕ್ಷರಗಳು ಛಂದಸ್ಸಿನ ಹೆಸರು : ಉತ್ಪಲಮಾಲಾ ವೃತ್ತ

============================================================

### ಚಂಪಕಮಾಲಾ ವೃತ್ತ

1.ಖಳನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂ

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| UUU | U -U | - U U | U - U | U - U | U - U | –U – |
| ಖಳನೊ | ಳವಿಂಗೆ | ಕುಪ್ಪೆ ವ | ರಮೆಂಬ | ವೊಲಾಂಬ | ರಮುಂಟೆ | ನಿನ್ನದೊಂ |

= ಒಟ್ಟು 21 ಅಕ್ಷರಗಳು

ಛಂದಸ್ಸಿನ ಹೆಸರು : ಚಂಪಕಮಾಲಾ ವೃತ್ತ

# ಕಂದ ಪದ್ಯ

1. ಅತಿಕುಟಿಲಮನಂ ಧನಲು
ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ

4 4 4

| | | | |
|---|---|---|---|
| UUUU | UU – | UU – | |
| ಅತಿಕುಟಿ | ಲಮನಂ | ಧನಲು | = 12 |

| | | | | | |
|---|---|---|---|---|---|
| 4 | 4 | 4 | 4 | 4 | |
| U U – | – – | U – U | UU – | UU – | |
| ಬ್ಧತೆಯಿಂ | ದಂದು | ಷ್ಟ ಬುದ್ಧಿ | ನುಡಿದಂ | ಪುಸಿಯಂ | = 20 |

ಛಂದಸ್ಸಿನ ಹೆಸರು : ಕಂದ ಪದ್ಯ

===========================================

**ಉದಾಹರಣೆಗೆ**

1. ಅತಿಕುಟಿಲಮನಂ ಧನಲು
ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ

2. ಮತಿಗೆಟ್ಟು ತಸ್ಕರಸ್ಯಾ
ನೃತಂ ಬಲಂ ಎನಿಪ ವಾಕ್ಯವಂ ನೆನೆಯುತ್ತುಂ

3. ಅಂತೆಂಬನಾರ್ಗೆ ಪಿರಿದುಂ
ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನ ಪೇ

4. ಳೆಂತೆನಗೆ ಕೆಳೆಯನೇ ನೂಂ
ಕಂತಪ್ಪನನರಿಯೆನೆಂದು ಸಭೆಯೊಳ್ ನುಡಿದಂ

5. ನಿಮಗೆ ಪೊಡೆಮಟ್ಟು ಪೋಪೀ
ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ

6. ಸಮಕೊಳಿಸಲೆಂದು ಬಂದೆನೆ
ಸಮರದೊಳೆನಗಜ್ಜ ಪೇಳೆಮಾವುದು

# ಭಾಮಿನಿ ಷಟ್ಪದಿ

1. ಏನು ಹೇಳೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ

| | | | | |
|---|---|---|---|---|
| 3 | 4 | 3 | 4 | |
| – U | – – | – U | – – | = 14 |
| ಏನು | ಹೇಳೈ | ಕರ್ಣ | ಚಿತ್ತ | |

| | | | | |
|---|---|---|---|---|
| 3 | 4 | 3 | 4 | |
| – U | – U U | UUU | – – | = 14 |
| ಗ್ಲಾನಿ | ಯಾವುದು | ಮನಕೆ | ಕುಂತೀ | |

| | | | | | | | |
|---|---|---|---|---|---|---|---|
| 3 | 4 | 3 | 4 | 3 | 4 | ಗು | |
| – U | UUUU | – U | – U U | – U | – UU | – | =23 |
| ಸೂನು | ಗಳಬೆಸ | ಕೈಸಿ | ಕೊಂಬುದು | ಸೇರ | ದೇನಿನ | ಗೆ | |

===========================================

**ಉದಾಹರಣೆಗೆ**

1. ಇನತನೂಜನ ಕೂಡೆ ಮೈದುನ
ತನದ ಸರಸವನೆಸಗಿ ರಥದೊಳು
ದನುಜರಿಪು ಬರಸೆಳೆದು ಕುಳ್ಳಿರಿಸಿದನು ಪೀಠದಲಿ

2. ಎನಗೆ ನಿಮ್ಮಡಿಗಳಲಿ ಸಮಸೇ
ವನೆಯೆ ದೇವ ಮುರಾರಿಯಂಜುವೆ
ನೆನಲು ತೊಡೆಸೋಂಕಿನಲಿ ಸಾರಿದು ಶೌರಿಯಿಂತೆಂದ

3. ಏನು ಹೇಳೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ

4. ಲಲನೆ ಪಡೆದೀಯೈದು ಮಂತ್ರಂ
ಗಳಲಿ ಮೊದಲಿಗ ನೀನು ನಿನ್ನಯ
ಬಳಿ ಯುಧಿಷ್ಠಿರದೇವ ಮೂರನೆಯಾತ ಕಲಿಭೀಮ

# ವಾರ್ಧಕ ಷಟ್ಪದಿ

1. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
ನೊರ್ವನೇ ವೀರನಾತನ ಯಜ್ಞತುರಗಮಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ

| | | | | |
|---|---|---|---|---|
| 5 | 5 | 5 | 5 | |
| – U – | – – U | UUUUU | – – U | = 20 |
| ಉರ್ವಿಯೊಳ್ | ಕೌಸಲ್ಯೆ | ಪಡೆದಕುವ | ರಂರಾಮ | |

| | | | | |
|---|---|---|---|---|
| 5 | 5 | 5 | 5 | |
| – U – | – U – | UU – U | UUUUU | = 20 |
| ನೊರ್ವನೇ | ವೀರನಾ | ತನ ಯಜ್ಞ | ತುರಗಮಿದು | |

| | | | | | | | |
|---|---|---|---|---|---|---|---|
| 5 | 5 | 5 | 5 | 5 | 5 | 2 | |
| – UUU | – U – | – U– | UUU– | –U– | UUU– | | |
| ನಿರ್ವಹಿಸ | ಲಾರ್ಪರಾ | ರಾದೊಡಂ | ತಡೆಯಲೆಂ | ದಿರ್ದಲೇ | ಖನವನೋ | ದಿ | = 32 |

ಛಂದಸ್ಸಿನ ಹೆಸರು : ವಾರ್ಧಕ ಷಟ್ಪದಿ

==================================================

**ಉದಾಹರಣೆಗೆ**

(ವೀರಲವ ಪದ್ಯಭಾಗ)

# ಅಲಂಕಾರಗಳ ಮಾದರಿಗಳು ಅಭ್ಯಾಸಕ್ಕಾಗಿ

**ಅಲಂಕಾರವನ್ನು ಹೆಸರಿಸಿ , ಲಕ್ಷಣ ಬರೆದು ಸಮನ್ವಯಗೊಳಿಸಿ (1x3=3)**

## *ಉಪಮಾಲಂಕಾರ*

1. "ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು."

| | |
|---|---|
| ಲಕ್ಷಣ | ಎರಡು ವಸ್ತುಗಳ ನಡುವಿನ ಪರಸ್ಪರ ಹೋಲಿಕೆಯನ್ನು ಹೇಳುವುದು |
| ಅಲಂಕಾರ | ಉಪಮಾಲಂಕಾರ |
| ಉಪಮೇಯ | ಭೀಮ ದುರ್ಯೋಧನರು |
| ಉಪಮಾನ | ಮದಗಜಗಳು |
| ಉಪಮಾವಾಚಕ | ಅಂತೆ |
| ಸಮಾನ ಧರ್ಮ | ಹೋರಾಡುವುದು |
| ಸಮನ್ವಯ | ಇಲ್ಲಿ ಉಪಮೇಯವಾದ ಭೀಮ ದುರ್ಯೋಧನರರನ್ನು ಉಪಮಾನವಾದ ಮದಗಜಗಳಿಗೆ ಹೋಲಿಸಲಾಗಿದೆ. ಆದ್ದರಿಂದ ಇದು ಉಪಮಾಲಂಕಾರ. |

2. "ಪ್ರಾಚೀನ ಮಹಾಕಾವ್ಯಗಳಂತೆ ಪೂಲವರ್ಥವೊಂದುಮಹಾಕೋಶವಾಗಿದೆ"
3. "ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯ ವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು"
4. "ಒಳಗಿನ ಮಂದಿ ಗುಂಡು ಹೊಡಿದರೋ ಮುಂಗಾರಿ ಸಿಡಿಲ ಸಿಡಿದ್ಹಾಂಗ"
5. "ಸಿಡಿಲ ಸಿಡಿದ್ಹಾಂಗ ಗುಂಡು ಸುರಿದಾವ"
6. "ನೀಚರಿಗೆ ಮಾಡಿದ ಉಪಕಾರ ಹಾವಿಗೆ ಹಾಲೆರದಂತೆ"
7. "ಹಸುಳೆಯಂತೆ ಕಾಂಬನಂತೆ"
8. "ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆಸಿದಂತೆ"
9. "ಬಳಾರಿಯ ಮನೆಯಂ ಪರಕೆಯ ಕುರಿಯಂ ಪುಗಿಸುವಂತೆ"

## * ರೂಪಕಾಲಂಕಾರಗಳ *

1. "ಮಾರಿಗೌತಣವಾಯ್ತು ನಾಳಿನ ಭಾರತವು"

| | |
|---|---|
| ಲಕ್ಷಣ | ಉಪಮೇಯ ಹಾಗೂ ಉಪಮಾನಗಳಲ್ಲಿ ಅಭೇದವನ್ನು ಉಂಟುಮಾಡುವುದು |
| ಅಲಂಕಾರ | ರೂಪಕಾಲಂಕಾರ |
| ಉಪಮೇಯ | ನಾಳಿನ ಭಾರತ ಯುದ್ಧ |
| ಉಪಮಾನ | ಮಾರಿಗೌತಣ |
| ಸಮನ್ವಯ | ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಗೆ ಹೋಲಿಸಿದೆ. |

2. "ಮುಖ ಕಮಲ ಅರಳಿತು"
3. "ಭೂಮಿಜಾತೆ ಆತ್ಮ ಕಾಮಕಲ್ಪಲತೆ"
4. "ಅಳ್ಳಿರಿಯತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರು ನಿನ್ನನಿರಿಯದೆ ಪೇಳು ವಿಶ್ವಾಮಿತ್ರ

# ಗಾದೆಗಳು

## ತಾಳಿದವನು ಬಾಳಿಯಾನು

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ತ್ವವನ್ನು ತಿಳಿಸುತ್ತದೆ. ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳೇ ಗಾದೆಗಳು. ಅಂತಹ ಮಹತ್ತ್ವದ ಗಾದೆಗಳಲ್ಲಿ "ತಾಳಿದವನು ಬಾಳಿಯಾನು" ಎಂಬ ಗಾದೆಯೂ ಒಂದಾಗಿದೆ

- ದಾನಗಳಲ್ಲೆಲ್ಲಾ ನಿಧಾನವೇ ಶ್ರೇಷ್ಠವಾದದ್ದು. ಮನುಷ್ಯನು ಶಾಂತನೂ, ತಾಳಿದವನೂ ಆದಾಗ ಜೀವನದ ಸುಖ–ದುಃಖಗಳು ಅವನಿಗೆ ಸಮನಾಗಿ ತೋರುವುವು. ಕೊನೆಗೆ ಜೀವನದಲ್ಲಿ ಜಯಶೀಲನಾಗುತ್ತಾನೆ.
- ಗಿಡ ನೆಟ್ಟ ಕೂಡಲೇ ಫಲ ಬಿಡಬೇಕು ಎಂದರೆ ಸಾಧ್ಯವಿಲ್ಲ. ತಾಳ್ಮೆಯಿಂದ ಪಡೆದದ್ದು ದೀರ್ಘಕಾಲ ಉಳಿಯುತ್ತದೆ. ಆದ್ದರಿಂದಲೇ ಕನಕದಾಸರು "ತಾಳುವಿಕೆಗಿಂತ ತಪವು ಇಲ್ಲ" ಎಂದಿದ್ದಾರೆ.

## ಮನಸ್ಸಿದ್ದರೆ ಮಾರ್ಗ

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ತ್ವವನ್ನು ತಿಳಿಸುತ್ತದೆ. ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳೇ ಗಾದೆಗಳು. ಅಂತಹ ಮಹತ್ತ್ವದ ಗಾದೆಗಳಲ್ಲಿ "ಮನಸಿದ್ದರೆ ಮಾರ್ಗ" ಎಂಬ ಗಾದೆಯೂ ಒಂದಾಗಿದೆ.

- ಯಾವುದೇ ಕೆಲಸವನ್ನು ಮಾಡುವ ಮುನ್ನ ಆ ಕೆಲಸವನ್ನು ಮಾಡಿ ಮುಗಿಸುವೆನೆಂಬ ದೃಢಸಂಕಲ್ಪವಿರಬೇಕು. ಇದು ನನ್ನಿಂದ ಸಾಧ್ಯವೇ? ಎಂದು ಚಿಂತಿಸುತ್ತ ಕೈಕಟ್ಟಿ ಕುಳಿತರೆ ಯಾವ ಕೆಲಸವೂ ಆಗುವುದಿಲ್ಲ.
- ಏಕಲವ್ಯ ತನ್ನ ಗುರು ದ್ರೋಣಾಚಾರ್ಯರೇ ಎಂದು ಮನಸ್ಸಿನಲ್ಲಿಯೇ ತೀರ್ಮಾನಿಸಿ ಅವರ ಪ್ರತಿಮೆಯನ್ನು ಮುಂದಿಟ್ಟುಕೊಂಡು ಉತ್ತಮ ಬಿಲ್ಲುಗಾರನಾದನು. ಇದನ್ನರಿತು ಮನಸ್ಸಿಟ್ಟು ಕಾರ್ಯ ಕೈಗೊಂಡರೆ ಯಶಸ್ಸು ಲಭಿಸುತ್ತದೆ ಎಂಬುದನ್ನು ಈ ಗಾದೆಯು ವಿವರಿಸುತ್ತದೆ

## ಕೈ ಕೆಸರಾದರೆ ಬಾಯಿ ಮೊಸರು

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ತ್ವವನ್ನು ತಿಳಿಸುತ್ತದೆ. ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳೇ ಗಾದೆಗಳು. ಅಂತಹ ಮಹತ್ತ್ವದ ಗಾದೆಗಳಲ್ಲಿ "ಕೈ ಕೆಸರಾದರೆ ಬಾಯಿ ಮೊಸರು" ಎಂಬ ಗಾದೆಯೂ ಒಂದಾಗಿದೆ.

- ಕೈ ಕೆಸರಾಗುವುದು ಶ್ರಮದ ದುಡಿಮೆಯನ್ನು ಸಂಕೇತಿಸಿದರೆ, ಮೊಸರು ಅದರ ಪ್ರತಿಫಲವನ್ನು ಬಿಂಬಿಸುತ್ತದೆ. ಅಂದರೆ 'ಕಷ್ಟಪಟ್ಟರೆ ಸುಖ' ಎಂಬ ಮಾತನ್ನು ಪ್ರತಿಧ್ವನಿಸುವ ಈ ಗಾದೆಯು ಕಷ್ಟಪಟ್ಟು ದುಡಿದು ಅದರಿಂದ ಸತ್ಫಲವನ್ನು ಪಡೆಯುವುದನ್ನು ತಿಳಿಸುತ್ತದೆ.
- ಬಸವಣ್ಣನವರ "ಕಾಯಕವೇ ಕೈಲಾಸ" ಎಂಬ ನುಡಿಯು ಕೂಡ ಮೇಲಿನ ಗಾದೆಯ ಅರ್ಥವನ್ನು ಸಮರ್ಥಿಸುತ್ತದೆ.

## ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ತ್ವವನ್ನು ತಿಳಿಸುತ್ತದೆ. ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳೇ ಗಾದೆಗಳು. ಅಂತಹ ಮಹತ್ತ್ವದ ಗಾದೆಗಳಲ್ಲಿ "ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ " ಎಂಬ ಗಾದೆಯೂ ಒಂದಾಗಿದೆ.

- ಕುಂಬಾರನು ಮಣ್ಣನ್ನು ತಂದು ಹದಗೊಳಿಸಿ ಮಡಿಕೆಗಳನ್ನು ತಯಾರಿಸಲು ಬಹಳಷ್ಟು ಕಾಲ ಬೇಕಾಗುತ್ತದೆ. ಆದರೆ ಅವಷ್ಟನ್ನು ಒಂದು ಕೋಲಿನಿಂದ ಒಂದೆರಡು ನಿಮಿಷಗಳಲ್ಲಿ ಸುಲಭವಾಗಿ ಒಡೆದು ಹಾಕಬಹುದು
- ಒಂದು ಮನೆ ಕಟ್ಟಲು ವರ್ಷಾನುಗಟ್ಟಲೆ ಸಮಯ ಬೇಕಾಗುತ್ತದೆ. ಅದನ್ನು ಕೆಡವಿ ಹಾಕಲು ಒಂದೆರಡು ಗಂಟೆಗಳು ಸಾಕು.
- ಹಾಗೇ ಮನುಷ್ಯ ತನ್ನ ಉತ್ತಮವಾದ ಜೀವನವನ್ನು ಹಾಳುಮಾಡಿಕೊಳ್ಳಲು ಒಂದು ಗಳಿಗೆ ಸಾಕು. ಆದ್ದರಿಂದ ಜೀವನದಲ್ಲಿ ಕಷ್ಟಪಟ್ಟು ರೂಪಿಸಿಕೊಂಡ ವ್ಯಕ್ತಿತ್ವವನ್ನು ಕಾಪಾಡಿಕೊಂಡು ಬದುಕಬೇಕು ಎಂಬುದನ್ನು ಈ ಗಾದೆಯು ತಿಳಿಸುತ್ತದೆ.

## ಕೂಡಿಬಾಳಿದರೆ ಸ್ವರ್ಗ ಸುಖ

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ತ್ವವನ್ನು ತಿಳಿಸುತ್ತದೆ. ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳೇ ಗಾದೆಗಳು. ಅಂತಹ ಮಹತ್ತ್ವದ ಗಾದೆಗಳಲ್ಲಿ "ಕೂಡಿಬಾಳಿದರೆ ಸ್ವರ್ಗ ಸುಖ" ಎಂಬ ಗಾದೆಯೂ ಒಂದಾಗಿದೆ.

- ❖ ಕೂಡಿ ಬಾಳುವುದು ಎಂದರೆ ಒಟ್ಟಾಗಿ ಜೀವನ ನಡೆಸುವುದು ಎಂದರ್ಥ. ಒಂದೊಂದು ಕಡ್ಡಿಯನ್ನು ಬಹುಸುಲಭವಾಗಿ ಮುರಿಯಬಹುದು. ಆದರೆ ಅನೇಕ ಕಡ್ಡಿಗಳನ್ನು ಒಟ್ಟಿಗೆ ಸೇರಿಸಿ ಕಟ್ಟುಕಟ್ಟಿ ಮುರಿಯಲು ಸಾಧ್ಯವಿಲ್ಲ.
- ❖ ಸಮಾಜದಲ್ಲಿ ವ್ಯಕ್ತಿಯು ಏಕಾಂಗಿಯಾಗಿ ಬದುಕಲು ಸಾಧ್ಯವಿಲ್ಲ. ಎಲ್ಲರೊಡನೆಯೂ ಕೂಡಿ ಬಾಳಿದಾಗ ಮಾತ್ರ ಸಂತೋಷವನ್ನು ಕಾಣಲು ಸಾಧ್ಯ
- ❖ ಜನರು ತಮ್ಮ ಸ್ವಾರ್ಥವನ್ನು ಬಿಟ್ಟು ಎಲ್ಲರೊಡನೆ ಕಲೆತು ಬಾಳುವೆಯನ್ನು ನಡೆಸಿದಾಗ ಸ್ವರ್ಗ ಸುಖವು ನಮಗೆ ದೊರೆಯುತ್ತದೆ ಎಂಬುದೇ ಈ ಗಾದೆಯ ಅರ್ಥ.

## ಮಾತೇ ಮುತ್ತು; ಮಾತೇ ಮೃತ್ಯು

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ತ್ವವನ್ನು ತಿಳಿಸುತ್ತದೆ. ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳೇ ಗಾದೆಗಳು. ಅಂತಹ ಮಹತ್ತ್ವದ ಗಾದೆಗಳಲ್ಲಿ "ಮಾತೇ ಮುತ್ತು; ಮಾತೇ ಮೃತ್ಯು"ಎಂಬ ಗಾದೆಯೂ ಒಂದಾಗಿದೆ.

- .ನಾವು ಆಡುವ ಮಾತುಗಳು ಮಧುರವಾಗಿದ್ದಾಗ ಸಂಬಂಧಗಳು ಸಹ ಮಧುರವಾಗಿರುತ್ತವೆ. ಇಲ್ಲದಿದ್ದರೆ ಆ ಮಾತೇ ನಮಗೆ ಮೃತ್ಯುವಾಗುತ್ತದೆ.
- ಬಸವಣ್ಣನವರು ಆ ದೃಷ್ಟಿಯಿಂದಲೇ "ನುಡಿದರೆ ಮುತ್ತಿನ ಹಾರದಂತಿರಬೇಕು" ಎಂದಿರುವುದು. ಅಲ್ಲಮಪ್ರಭು "ಮಾತೆಂಬುದು ಜ್ಯೋತಿರ್ಲಿಂಗ" ಎಂದಿದ್ದಾರೆ. ಆ ಮೂಲಕ ಮಾತಿನ ಶ್ರೇಷ್ಠತೆಯನ್ನು ಎತ್ತಿ ಹಿಡಿದಿದ್ದಾರೆ.

## ಕಟ್ಟುವುದು ಕಠಿಣ; ಕೆಡಹುವುದು ಸುಲಭ.

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ತ್ವವನ್ನು ತಿಳಿಸುತ್ತದೆ. ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳೇ ಗಾದೆಗಳು. ಅಂತಹ ಮಹತ್ತ್ವದ ಗಾದೆಗಳಲ್ಲಿ "ಕಟ್ಟುವುದು ಕಠಿಣ; ಕೆಡಹುವುದು ಸುಲಭ." ಎಂಬ ಗಾದೆಯೂ ಒಂದಾಗಿದೆ.

- ಯಾವುದೇ ಕೆಲಸವನ್ನು ಸರಿಯಾಗಿ ಮಾಡಬೇಕಾದರೆ ಕಷ್ಟಪಡಬೇಕು. ಆದರೆ ಹಾಳು ಮಾಡಲು ಕಷ್ಟ ಪಡಬೇಕಾಗಿಲ್ಲ. 'ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ' ಎಂಬ ಗಾದೆಯೂ ಇದೇ ಅರ್ಥವನ್ನು ಹೊಂದಿದೆ.
- ಒಂದು ಮನೆಯನ್ನು ಕಟ್ಟುವುದು ಎಷ್ಟು ಕಠಿಣವಾದ ಕಾರ್ಯ. ಆದರೆ ಆ ಮನೆಯನ್ನು ಸುಲಭವಾಗಿ ಕೆಡವಿ ಹಾಕಬಹುದು. ಆದ್ದರಿಂದ ಕಟ್ಟುವುದು ಕಠಿಣ; ಕೆಡಹುವುದು ಸುಲಭ.

## ಆಳಾಗಬಲ್ಲವನು; ಅರಸಾಗಬಲ್ಲನು

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ತ್ವವನ್ನು ತಿಳಿಸುತ್ತದೆ. ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳೇ ಗಾದೆಗಳು. ಅಂತಹ ಮಹತ್ತ್ವದ ಗಾದೆಗಳಲ್ಲಿ "ಆಳಾಗಬಲ್ಲವನು; ಅರಸಾಗಬಲ್ಲನು" ಎಂಬ ಗಾದೆಯೂ ಒಂದಾಗಿದೆ.

- ಕಷ್ಟಪಟ್ಟು ಕೆಲಸ ಮಾಡಿದವನು ಸುಖವಾಗಿ ಕುಳಿತು ಊಟಮಾಡಬಲ್ಲ ಎಂಬುದು ಈ ಗಾದೆ ಮಾತಿನ ಅರ್ಥವಾಗಿದೆ.
- ಕೈ ಕೆಸರಾದರೆ ಬಾಯಿ ಮೊಸರು, ಕಷ್ಟ ಪಟ್ಟರೆ ಫಲವುಂಟು ಎಂಬ ಗಾದೆ ಮಾತುಗಳು ಇದೇ ಅರ್ಥವನ್ನು ಕೊಡುತ್ತವೆ.
- ರೈತನು ಕೃಷಿಯಲ್ಲಿ ತನ್ನನ್ನು ತೊಡಗಿಸಿಕೊಂಡು ಆಳಿನಂತೆ ಶ್ರಮಪಟ್ಟು ದುಡಿದರೆ ಮುಂದೆ ಅರಸನಂತೆ ಜೀವನ ನಡೆಸಬಹುದು.

## ಹೆತ್ತ ತಾಯಿ, ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ತ್ವವನ್ನು ತಿಳಿಸುತ್ತದೆ. ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳೇ ಗಾದೆಗಳು. ಅಂತಹ ಮಹತ್ತ್ವದ ಗಾದೆಗಳಲ್ಲಿ "ಹೆತ್ತ ತಾಯಿ ,ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು" ಎಂಬ ಗಾದೆಯೂ ಒಂದಾಗಿದೆ.

ಜನನಿ ಮತ್ತು ಜನ್ಮಭೂಮಿ ಇವರೆಡೂ ಸ್ವರ್ಗಕ್ಕಿಂತಲೂ ಶ್ರೇಷ್ಠ. ಮಕ್ಕಳನ್ನು ಹೆತ್ತು, ಹೊತ್ತು ಅವರ ಸುಖವನ್ನೇ ಬಯಸಿ ಅವರ ಕೈ ಹಿಡಿದು ನಡೆಸುವ ಕರುಣಾಮಯಿ ತಾಯಿ. ಆದ್ದರಿಂದಲೇ 'ಮಾತೃದೇವೋಭವ' ಎಂದು ತಾಯಿಯನ್ನು ದೇವರಿಗೆ ಹೋಲಿಸಿರುವುದು.

ಹೆತ್ತ ತಾಯಿಯಷ್ಟೇ ಪವಿತ್ರವಾದದ್ದು ಹೊತ್ತನಾಡು. ತಾಯಿ ನಮಗೆ ಜನ್ಮ ನೀಡುತ್ತಾಳೆ. ಆದರೆ ನಮಗೆ ಆಶ್ರಯ ನೀಡುವುದು ಭೂಮಿ ತಾಯಿ. ಆದ್ದರಿಂದ ತಾಯಿ ಹಾಗೂ ತಾಯ್ನಾಡನ್ನು ಗೌರವಿಸಬೇಕು ಜೊತೆಗೆ ಇವೆರಡರ ರಕ್ಷಣೆಗಾಗಿ ಪ್ರಾಣ ತ್ಯಾಗಕ್ಕೂ ಸಿದ್ಧರಿರಬೇಕು.

## ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ತ್ವವನ್ನು ತಿಳಿಸುತ್ತದೆ. ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳೇ ಗಾದೆಗಳು. ಅಂತಹ ಮಹತ್ತ್ವದ ಗಾದೆಗಳಲ್ಲಿ "ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ" ಎಂಬ ಗಾದೆಯೂ ಒಂದಾಗಿದೆ.

- ಸತ್ಯ ಸದಾ ಜೀವಂತವಾದುದು; ಸುಳ್ಳು ಎಂದು ಸುಖವನ್ನು ಕೊಡಲಾರದು ಎನ್ನುವುದು ಈ ಗಾದೆ ಮಾತಿನ ಅರ್ಥ.
- ಸತ್ಯ ಹರಿಶ್ಚಂದ್ರ ತನ್ನ ಜೀವನದಲ್ಲಿ ಸತ್ಯಕ್ಕಾಗಿ ಹೋರಾಡಿ ಶಾಶ್ವತವಾದ ಕೀರ್ತಿಯನ್ನು ಪಡೆದನು.ಮಹಾತ್ಮ ಗಾಂಧೀಜಿ, ಸ್ವಾಮಿ ವಿವೇಕಾನಂದ ಮೊದಲಾದ ಮಹಾತ್ಮರು ಸತ್ಯ ಜೀವನವನ್ನು ನಡೆಸಿದರು.
- ಆದ್ದರಿಂದ ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ ಎಂಬ ಮಾತನ್ನು ಎಂದಿಗೂ ಯಾರೂ ಮರೆಯಬಾರದು.

## ಹತ್ತನೇ ತರಗತಿಯ ಪಠ್ಯ ಪುಸ್ತಕದಲ್ಲಿ ನೀಡಿರುವ ಗಾದೆ ಮಾತುಗಳು

1. ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ
2. ಮನಸ್ಸಿದ್ದರೆ ಮಾರ್ಗ
3. ಕೂಡಿಬಾಳಿದರೆ ಸ್ವರ್ಗ ಸುಖ.
4. ಮಾತೇ ಮುತ್ತು, ಮಾತೇ ಮೃತ್ಯು
5. ಕಟ್ಟುವುದು ಕಠಿಣ ; ಕೆಡಹುವುದು ಸುಲಭ.
6. ಹೆತ್ತ ತಾಯಿ ; ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.
7. ಸತ್ಯಕ್ಕೆ ಸಾವಿಲ್ಲ ; ಸುಳ್ಳಿಗೆ ಸುಖವಿಲ್ಲ.
8. ಆಳಾಗಬಲ್ಲವನು ; ಅರಸಾಗಬಲ್ಲನು.
9. ಆಪತ್ತಿಗಾದವನೇ ನೆಂಟ (ಯುದ್ಧ)
10. ತಾಳಿದವನು ಬಾಳಿಯಾನು (ಶಬರಿ)
11. ದೇಶ ಸುತ್ತು ಕೋಶ ಓದು. (ಲಂಡನ್‌ನಗರ)
12. ಆಡು ಮುಟ್ಟದ ಸೊಪ್ಪಿಲ್ಲ (ಭಾಗ್ಯ ಶಿಲ್ಪಿಗಳು)
13. ಓದು ಒಕ್ಕಾಲು ಬುದ್ಧಿ ಮುಕ್ಕಾಲು (ಎದೆಗೆ ಬಿದ್ದ ಅಕ್ಷರ)
14. ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡರೆ ನೂರು ವರ್ಷ ಆಯಸ್ಸು (ವ್ಯಾಘ್ರಗೀತೆ)
15. ಮಾಡಿದುಣ್ಣೊ ಮಾರಾಯ (ವೃಕ್ಷಸಾಕ್ಷಿ)
16. ಹಣಕ್ಕಿಂತ ಗುಣಮೇಲು (ಸುಕುಮಾರಸ್ವಾಮಿ ಕಥೆ)

## ಮಾದರಿ ಪತ್ರಲೇಖನ ಅಭ್ಯಾಸಕ್ಕಾಗಿ

**ಕೆಳಗಿನ ಯಾವುದಾರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.(1X5=5)**

ಇವರಿಂದ
______________
______________
______________

ಇವರಿಗೆ
______________
______________
______________

ಮಾನ್ಯರೇ

ವಿಷಯ :- ____________________________________

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ________________________________
____________________________________________________________
____________________________________________________________
____________________________________________________________
____________________________________________________________

ವಂದನೆಗಳೊಂದಿಗೆ . . . .

ಸ್ಥಳ :
ದಿನಾಂಕ :

ತಮ್ಮ ವಿಶ್ವಾಸಿ

### ಹೊರವಿಳಾಸ

| ಇವರಿಂದ | ಇವರಿಗೆ |
| --- | --- |
| ______________<br>______________<br>______________ | ______________<br>______________<br>______________ |

# ಮಾದರಿ ಪ್ರಶ್ನೆಗಳು

1. ನಿಮ್ಮನ್ನು ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯ 'ಕೌಶಿಕ್' ಎಂದು ಭಾವಿಸಿಕೊಂಡು ಮೈಸೂರಿನ ಮೃಗಾಲಯದ ವೀಕ್ಷಣೆಗೆ ಸಮಯಾವಕಾಶ ಕೋರಿ ಅಲ್ಲಿನ ವ್ಯವಸ್ಥಾಪಕರಿಗೆ ಮನವಿ ಪತ್ರವನ್ನು ಬರೆಯಿರಿ

2. ನಿಮ್ಮನ್ನು ಧಾರವಾಡದ ಸರ್ಕಾರಿ ಪ್ರೌಢಶಾಲೆಯ 'ಸುಭೋಧ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನುಸ್ಥಾಪಿಸುವಂತೆ ಕೋರಿ, ಗ್ರಾಮ ಪಂಚಾಯತಿಯ ಅಧ್ಯಕ್ಷರಿಗೊಂದು ಮನವಿ ಪತ್ರ ಬರೆಯಿರಿ

3. ನಿನ್ನನ್ನು ಪಾಂಡವಪುರದ ನಾರಾಯಣಪುರ ನಿವಾಸಿ ವರ್ಷಿತ / ಮನೋಜ್ ಎಂದು ಭಾವಿಸಿಕೊಂಡು ನಿಮ್ಮ ಮನೆಯ ಮುಂಭಾಗದಲ್ಲಿ ಬಿದ್ದಿರುವ ಕಸದ ರಾಶಿಯನ್ನು ಸ್ಥಳಾಂತರಿಸುವಂತೆ ಕೋರಿ ನಾರಾಯಣಪುರ ಗ್ರಾಮ ಪಂಚಾಯಿತಿಯ ಅಧ್ಯಕ್ಷರಿಗೊಂದು ಮನವಿ ಪತ್ರ ಬರೆಯಿರಿ.

4. ನಿನ್ನನ್ನು ಅಕ್ಕಿಹೆಬ್ಬಾಳಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಪ್ರಮೋದ್ /ಸಿಂಚನ ಎಂದು ಭಾವಿಸಿಕೊಂಡು ನಿಮ್ಮ ಊರಿನಲ್ಲಿ ಅತಿವೃಷ್ಟಿಯಿಂದಾದ ಅನಾಹುತಕ್ಕೆ ಪರಿಹಾರವನ್ನು ನೀಡುವಂತೆ ಕೋರಿ ನಿಮ್ಮ ಜಿಲ್ಲಾಧಿಕಾರಿಗಳಿಗೊಂದು ಮನವಿ ಪತ್ರ ಬರೆಯಿರಿ.

5. ನಿನ್ನನ್ನು ಪಾಂಡವಪುರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಕವನ /ಧನುಷ್ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ 'ರಾಷ್ಟ್ರೀಯ ವಿಜ್ಞಾನ ದಿನ' ದ ವರದಿಯನ್ನು ಪತ್ರಿಕೆಯಲ್ಲಿ ಪ್ರಕಟಿಸುವಂತೆ ಕೋರಿ, ಪತ್ರಿಕೆಯ ಸಂಪಾದಕರಿಗೊಂದು ಮನವಿ ಪತ್ರ ಬರೆಯಿರಿ

6. ನಿನ್ನನ್ನು ಮೇಲುಕೋಟೆಯ ನಿವಾಸಿ ಸೋನಿಕಾ /ಪ್ರೀತಮ್ಎಂದು ಭಾವಿಸಿಕೊಂಡು ಮಂಡ್ಯ ಜಿಲ್ಲೆಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೊಂದು ಪತ್ರ ಬರೆದು, 'ಕನ್ನಡ ಸಾಹಿತ್ಯ ಪರಿಷತ್ತಿನ' ಸದಸ್ಯತ್ವ ಪಡೆಯಲು ಬೇಕಾಗಿರುವ ಅರ್ಜಿಗಳನ್ನು ಕಳುಹಿಸಿಕೊಡುವಂತೆ ಕೋರಿಮನವಿ ಪತ್ರಬರೆಯಿರಿ

7. ನಿನ್ನನ್ನು ಲಕ್ಷ್ಮೀಸಾಗರದ ಸರ್ಕಾರಿ ಪ್ರೌಢಶಾಲೆಯ ಶರತ್/ಬಿಂದು ಎಂದು ಭಾವಿಸಿಕೊಂಡು ,ನಿಮ್ಮ ಶಾಲೆಯಲ್ಲಿ ನಡೆದ 'ಕನ್ನಡೋತ್ಸವ' ಕಾರ್ಯಕ್ರಮದ ಕುರಿತು ವರದಿಯನ್ನು ಪ್ರಕಟಿಸುವಂತೆ ಕೋರಿ, ದಿನಪತ್ರಿಕೆಯ ಸಂಪಾದಕರಿಗೊಂದು ಪತ್ರ ಬರೆಯಿರಿ.

# ಪ್ರಬಂಧಗಳು

## 1.ರಾಷ್ಟ್ರೀಯ ಹಬ್ಬಗಳ ಮಹತ್ವ

ಪೀಠಿಕೆ : ಇಡೀ ರಾಷ್ಟ್ರದ ಜನತೆ ತಮ್ಮ ಜಾತಿ,ಮತ, ಧರ್ಮ ಹಾಗೂ ಪ್ರಾದೇಶಿಕ ಭಿನ್ನತೆಯನ್ನು ತೊರೆದು ಸಡಗರ ಸಂಭ್ರಮದಿಂದ ಪಾಲ್ಗೊಂಡು ಒಟ್ಟಾಗಿ ಆಚರಿಸುವ ಹಬ್ಬಗಳನ್ನು 'ರಾಷ್ಟ್ರೀಯ ಹಬ್ಬಗಳು' ಎಂದು ಕರೆಯುತ್ತೇವೆ.

ವಿಷಯ ನಿರೂಪಣೆ: ರಾಷ್ಟ್ರೀಯ ಹಬ್ಬಗಳು ನಮ್ಮ ಗತಕಾಲದ ಉಜ್ವಲ ನಿದರ್ಶನಗಳನ್ನು, ಭವ್ಯ ಐತಿಹಾಸಿಕ ಪರಂಪರೆಗಳನ್ನು ನೆನಪಿಸಿಕೊಟ್ಟು ನಮಗೆ ಸ್ಪೂರ್ತಿಯನ್ನು ನೀಡುತ್ತವೆ. ರಾಷ್ಟ್ರೀಯ ಹಬ್ಬಗಳಲ್ಲಿ ಮುಖ್ಯವಾದವುಗಳೆಂದರೆ.
1) ಆಗಸ್ಟ್ 15, ಸ್ವಾತಂತ್ರ್ಯ ದಿನಾಚರಣೆ, 2).ಅಕ್ಟೋಬರ್ 2 ಗಾಂಧಿ ಜಯಂತಿ,
3).ಸೆಪ್ಟೆಂಬರ್ 5 ಶಿಕ್ಷಕರ ದಿನಾಚರಣೆ, 4). ನವೆಂಬರ್ 14 ಮಕ್ಕಳದಿನಾಚರಣೆ,
5)ಜನವರಿ 26 ಗಣರಾಜ್ಯೋತ್ಸವ.
ಶಾಲೆಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ ಹಾಗೂ ಗಣರಾಜ್ಯೋತ್ಸವಗಳನ್ನು ವಿಶಿಷ್ಟವಾಗಿ ಆಚರಿಸುವ ಪರಿಪಾಠವಿದೆ. ಆದರೆ ಇತ್ತೀಚೆಗೆ ಈ ರಾಷ್ಟ್ರೀಯ ಹಬ್ಬಗಳನ್ನು ನೆಪ ಮಾತ್ರಕ್ಕೆ ಆಚರಿಸುತ್ತಿರುವುದು ವಿಷಾದಕರ ಸಂಗತಿ. ಇದರಿಂದ ನಮ್ಮ ರಾಷ್ಟ್ರದ ಏಕತೆಗೆ ಭಂಗ ಬರುತ್ತದೆ.

ಉಪಸಂಹಾರ : ರಾಷ್ಟ್ರೀಯ ಹಬ್ಬಗಳು ಭಾರತೀಯರಿಗೆಲ್ಲ ಪವಿತ್ರ ದಿನಗಳಾಗಿವೆ. ಆದುದರಿಂದ ಈ ಹಬ್ಬಗಳನ್ನು ಶ್ರದ್ಧಾಪೂರ್ವಕವಾಗಿ ಆಚರಿಸುವುದು ಭಾರತೀಯರೆಲ್ಲರ ಆದ್ಯ ಕರ್ತವ್ಯವಾಗಿದೆ.

## 2.ಗ್ರಂಥಾಲಯಗಳ ಮಹತ್ವ

ಪೀಠಿಕೆ : "ಗ್ರಂಥಾಲಯಗಳು ಜ್ಞಾನದ ದೇಗುಲಗಳು". ಒಂದು ಗ್ರಂಥಾಲಯ ಒಂದು ವಿಶ್ವವಿದ್ಯಾನಿಲಯವಿದ್ದಂತೆ. ಜ್ಞಾನದ ತೃಷೆಯನ್ನು ತಣಿಸುವ ಸಿಹಿನೀರಿನ ಸರೋವರಗಳು.

ವಿಷಯ ನಿರೂಪಣೆ : ಓದಲು ಇಲ್ಲವೇ ಎರವಲು ರೂಪದಲ್ಲಿ ಪಡೆಯಲು ಬೇಕಾದ ಪುಸ್ತಕಗಳನ್ನು ಸಂಗ್ರಹಿಸಿರುವ ಸ್ಥಳವೇ ಗ್ರಂಥಾಲಯಗಳು. ವಿರಾಮ ಕಾಲದ ಸದುಪಯೋಗ ಮಾಡಿಕೊಳ್ಳಲು ಗ್ರಂಥಾಲಯ ಉತ್ತಮ ತಾಣ. ಸರ್ಕಾರವು ಸಾರ್ವಜನಿಕ ಗ್ರಂಥಾಲಯಗಳನ್ನು ಗ್ರಾಮಪಂಚಾಯಿತಿ ಮಟ್ಟದಿಂದ ರಾಜ್ಯ ಮಟ್ಟದವರೆಗೂ ಸ್ಥಾಪಿಸಿ, ಉಚಿತವಾಗಿ ಜನರಿಗೆ ಪುಸ್ತಕಗಳನ್ನು ಓದಲು, ಎರವಲು ಪಡೆಯಲು ಅವಕಾಶ ಮಾಡಿಕೊಟ್ಟಿದೆ.

ಉಪಸಂಹಾರ : ಗ್ರಂಥಾಲಯಗಳು ಕೇವಲ ಪುಸ್ತಕ ಭಂಡಾರವಲ್ಲ. ಪೀಳಿಗೆಯಿಂದ ಪೀಳಿಗೆಗೆ ಜ್ಞಾನವನ್ನು ಹಂಚುವ ಮಹತ್ತರವಾದ ಕಾರ್ಯಗಳನ್ನು ಮಾಡುತ್ತವೆ.

## 3.ಸಾಮಾಜಿಕ ಪಿಡುಗುಗಳು ಮತ್ತು ಅವುಗಳ ನಿವಾರಣೋಪಾಯಗಳು

ಪೀಠಿಕೆ : ಸಮಾಜದ ಪ್ರಗತಿಗೆ ಅಥವಾ ವ್ಯಕ್ತಿಯ ವ್ಯಕ್ತಿತ್ವದ ವಿಕಸನಕ್ಕೆ ಅಡ್ಡಿಯನ್ನು ಉಂಟುಮಾಡುವ ಶಕ್ತಿಗಳನ್ನು 'ಸಾಮಾಜಿಕ ಪಿಡುಗುಗಳು' ಎನ್ನುವರು. ಜಾತೀಯತೆ, ವರದಕ್ಷಿಣೆ, ಸ್ತ್ರೀ ಶೋಷಣೆ, ಜೀತಪದ್ಧತಿ, ಬಾಲಕಾರ್ಮಿಕ ಪದ್ದತಿ,ಮೂಢ ನಂಬಿಕೆಗಳು, ಬಾಲ್ಯವಿವಾಹ ಮೊದಲಾದವು ಸಾಮಾಜಿಕ ಪಿಡುಗುಗಳಾಗಿವೆ.

ವಿಷಯ ನಿರೂಪಣೆ : 1. ಜಾತೀಯತೆಯಿಂದ ಮೇಲುಕೀಳು ಭಾವನೆಯುಂಟಾಗಿ ಜನರಲ್ಲಿ ದ್ವೇಷ, ಅಸೂಯೆ, ಅಶಾಂತಿ ಮೂಡಿ ದೇಶದ ಅಭಿವೃದ್ದಿಗೆ ಮಾರಕವಾಗಿ ಪರಿಣಮಿಸಿದೆ.

## 4.ಸ್ವಚ್ಛ ಭಾರತ ಅಭಿಯಾನ

ಪೀಠಿಕೆ : ಸ್ವಚ್ಛ ಭಾರತ ಎಂದರೆ ಇಡೀ ಭಾರತ ದೇಶವನ್ನು ನಿರ್ಮಲಗೊಳಿಸುವುದು ಎಂದರ್ಥ. ಸ್ವಚ್ಛ ಭಾರತ ಅಭಿಯಾನವು ಭಾರತ ದೇಶದ ಒಂದು ಅತ್ಯುತ್ತಮ ನೈರ್ಮಲ್ಯ ಯೋಜನೆಯಾಗಿದೆ.
ವಿಷಯ ನಿರೂಪಣೆ : ನಮ್ಮ ಇಂದಿನ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿ ಅವರು ಗಾಂಧೀಜಿಯವರ ಜನ್ಮದಿನವಾದ 2.10.2014ರಂದು ಸ್ವಚ್ಛ ಭಾರತ ಅಭಿಯಾನವನ್ನು ಪ್ರಾರಂಭಿಸಿದರು. ಗಾಂಧೀಜಿಯವರು ಹುಟ್ಟಿ 150 ವರ್ಷ ಪೂರ್ಣಗೊಳ್ಳುವ 2.10.2019ಕ್ಕೆ ಈ ಯೋಜನೆಯ ಗುರಿಯನ್ನು ಇಟ್ಟುಕೊಳ್ಳಲಾಗಿತ್ತು ಈ ಅವಧಿಯಲ್ಲಿ ಇಡೀ ದೇಶದಾದ್ಯಂತ ಆಂದೋಲನ ಕೈಗೊಂಡು ಜನರಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಿರುವುದು ಸಂತೋಷದ ವಿಷಯ.
ಉಪಸಂಹಾರ : ಸ್ವಚ್ಛ ಭಾರತ ಯೋಜನೆಯನ್ನು ಸಾಕಾರಗೊಳಿಸುವಲ್ಲಿ ಪ್ರತಿವಾರ ಕೇವಲ ಎರಡು ಗಂಟೆಗಳ ಅವಧಿಯನ್ನು ಮೀಸಲಿಡೋಣ ಈ ಮೂಲಕ ಪ್ರಧಾನ ಮಂತ್ರಿಗಳ ಕನಸನ್ನು ನನಸಾಗಿಸಿ ಅಭಿಯಾನವನ್ನು ಯಶಸ್ವಿಗೊಳಿಸೋಣ.

## 5.ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

ಪೀಠಿಕೆ : ಸ್ಮಾರಕವು ವ್ಯಕ್ತಿಯನ್ನು ಪ್ರಶಂಸಿಸಲು ಅಥವಾ ಮುಖ್ಯವಾದ ಘಟನೆಯನ್ನು ನೆನಪಿಸಿಕೊಳ್ಳಲು ಕಟ್ಟುವಂತಹ ಒಂದು ಬಗೆಯ ರಚನಾ ವಿನ್ಯಾಸ.

ವಿಷಯ ನಿರೂಪಣೆ : ಸ್ಮಾರಕಗಳು ಐತಿಹಾಸಿಕ ಹಾಗೂ ರಾಜಕೀಯ ಮಾಹಿತಿಗಳನ್ನು ತಿಳಿಸುವ ಉದ್ದೇಶದಿಂದಲೂ ಸಹ ನಿರ್ಮಿಸಲ್ಪಡುತ್ತವೆ. ಸ್ಮಾರಕಗಳನ್ನು ಸಾವಿರಾರು ವರ್ಷಗಳಿಂದ ನಿರ್ಮಿಸಲಾಗಿದ್ದು ನಾಗರಿಕತೆಯ ಚಿಹ್ನೆಗಳಾಗಿವೆ.ಅರಮನೆಗಳು, ಸಮಾಧಿಗಳು, ದೇವಾಲಯಗಳು, ವಿಜಯ ಮಂಟಪಗಳು, ಯುದ್ಧ ಸ್ಮಾರಕಗಳು ಹೀಗೆ ವಿವಿಧ ರೀತಿಯ ಸ್ಮಾರಕಗಳನ್ನು ಕಾಣಬಹುದು.

ಉಪಸಂಹಾರ : ಸ್ಮಾರಕಗಳು ನಾಡಿನ ಸಾಂಸ್ಕೃತಿಕ ಸಂಪತ್ತು. ಆದರೆ ಆಧುನೀಕತೆಯ ಭರಾಟೆಯಲ್ಲಿ ಪ್ರಾಚೀನ ಸ್ಮಾರಕಗಳು ನಶಿಸಿ ಹೋಗುತ್ತಿವೆ. ಆದ್ದರಿಂದ ಸರ್ಕಾರಗಳು ಪ್ರಾಚೀನ ಸ್ಮಾರಕಗಳನ್ನು ಸಂರಕ್ಷಿಸಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕಿದೆ. ಜೊತೆಗೆ ಅವುಗಳ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯ ಎಂಬುದು ನನ್ನ ಅಭಿಪ್ರಾಯವಾಗಿದೆ.

## 6. ರಾಷ್ಟ್ರೀಯ ಭಾವೈಕ್ಯತೆ

ಪೀಠಿಕೆ : ಒಂದು ರಾಷ್ಟ್ರದಲ್ಲಿ ವಾಸಿಸುವ ಜನರಲ್ಲಿರುವ ಅವರ ವೈವಿಧ್ಯತೆಗಳಾದ ಜಾತಿ, ಮತ, ಧರ್ಮ, ಪ್ರಾಂತ್ಯ, ಭಾಷೆಗಳ ವಿಭಿನ್ನತೆಯನ್ನು ಹೋಗಲಾಡಿಸಿ ನಾವೆಲ್ಲರೂ ಒಂದೇ ಎಂಬ ಭಾವನೆ ಮೂಡಿಸುವುದೇ 'ರಾಷ್ಟ್ರೀಯ ಭಾವೈಕ್ಯತೆ' ಯಾಗಿದೆ.

ವಿಷಯ ನಿರೂಪಣೆ : ರಾಷ್ಟ್ರೀಯ ಏಕತೆಯನ್ನು ಬೆಳೆಸಲು ನಮ್ಮ ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ. ಅವುಗಳೆಂದರೆ.1.ಇಡೀ ಭಾರತಕ್ಕೆ ಒಂದೇ ಸಂವಿಧಾನ.2.ರಾಷ್ಟ್ರಗೀತೆ, ರಾಷ್ಟ್ರಧ್ವಜ ಹಾಗೂ ರಾಷ್ಟ್ರಲಾಂಛನಗಳ ಬಗ್ಗೆ ಗೌರವ ಭಾವನೆ ಮೂಡಿಸುವುದು.3.ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ,ಗಾಂಧೀ ಜಯಂತಿ, ಮಕ್ಕಳ ದಿನಾಚರಣೆ, ಶಿಕ್ಷಕರ ದಿನಾಚರಣೆ ಮೊದಲಾದ ರಾಷ್ಟ್ರೀಯ ಹಬ್ಬಗಳ ಆಚರಣೆ.

ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವಲ್ಲಿ ಸರ್ಕಾರದ ಪಾತ್ರ ತುಂಬಾ ಮಹತ್ವದಾಗಿರುವಂತೆ ಇಂದು ಶಾಲಾ ಕಾಲೇಜುಗಳು ಸಹ ಮುಖ್ಯ ಪಾತ್ರ ವಹಿಸಿವೆ. ಶಿಕ್ಷಕರು ಪಾಠಗಳನ್ನು ಬೋಧಿಸುವಾಗ ಮಕ್ಕಳಲ್ಲಿ ರಾಷ್ಟ್ರಪ್ರೇಮ, ಹುಟ್ಟಿಸುವಂತಹ ಉದಾಹರಣೆಗಳನ್ನು ನೀಡಿ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಮನೋಭಾವನೆಯನ್ನು ಬೆಳೆಸಬೇಕು.

ಉಪಸಂಹಾರ : ರಾಷ್ಟ್ರೀಯ ಐಕ್ಯತೆ ಇಲ್ಲದೆ ಆರ್ಥಿಕ ಪ್ರಗತಿ ಸಾಧಿಸಲು ಸಾಧ್ಯವಾಗದು. ಆದ್ದರಿಂದ ಜನರು ತಮ್ಮ ಸ್ವಾರ್ಥ ಚಿಂತನೆಗಳನ್ನು ಬಿಟ್ಟು ರಾಷ್ಟ್ರದ ಐಕ್ಯತೆಗೋಸ್ಕರ ಶ್ರಮಿಸಬೇಕು. ಆಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ.

## 7. ಗ್ರಾಮ ಸ್ವರಾಜ್ಯ

ಪೀಠಿಕೆ : 'ಗ್ರಾಮ ಸ್ವರಾಜ್ಯ' ಎಂದರೆ ಗ್ರಾಮಗಳೇ ಸ್ವಯಂ ಆಡಳಿತ ಕೇಂದ್ರಗಳಾಗಿ ಕಾರ್ಯನಿರ್ವಹಿಸಿ ತಮ್ಮ ಗ್ರಾಮದ ಅಭಿವೃದ್ಧಿಗೆ ಬೇಕಾದ ಕಾರ್ಯವನ್ನು ಸ್ವತಃ ಗ್ರಾಮಸ್ಥರೇ ನಿರ್ಧಾರ ಕೈಗೊಳ್ಳುವ ಒಂದು ಸ್ಥಳೀಯ ಆಡಳಿತ ಸಂಸ್ಥೆ.

ವಿಷಯ ನಿರೂಪಣೆ : ಭಾರತವು ಗ್ರಾಮಗಳಿಂದ ಕೂಡಿದ ದೇಶ.ಪ್ರತಿಯೊಂದು ಗ್ರಾಮವು ಇಂದು ಗ್ರಾಮ ಪಂಚಾಯಿತಿ ಎಂಬ ಸ್ವಯಂ ಆಡಳಿತ ಸಂಸ್ಥೆಯನ್ನು ಹೊಂದಿದೆ. ಗ್ರಾಮದ ನೈರ್ಮಲ್ಯ ಕಾಪಾಡುವುದು, ಆರೋಗ್ಯ, ಶಿಕ್ಷಣ, ನೀರು ಸರಬರಾಜು, ವಿದ್ಯುತ್, ರಸ್ತೆಗಳು ಇವೇ ಮೊದಲಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವುದು ಪ್ರತಿಯೊಂದು ಗ್ರಾಮ ಪಂಚಾಯಿತಿಯ ಆದ್ಯ ಕರ್ತವ್ಯವಾಗಬೇಕು. ಆಗ ಮಾತ್ರ ಗಾಂಧೀಜಿ ಅವರ ಗ್ರಾಮ ಸ್ವರಾಜ್ಯದ ಕನಸು ನನಸಾಗುತ್ತದೆ.

ಉಪಸಂಹಾರ : ನಾವು ಪ್ರತಿಯೊಂದಕ್ಕೂ ಸರ್ಕಾರದ ಮುಂದೆ ಕೈಚಾಚದೆ ನಮ್ಮ ವ್ಯಾಪ್ತಿಯಲ್ಲೇ ಇಡೀ ಗ್ರಾಮವನ್ನೇ ಒಂದು ಕುಟುಂಬ ಎಂದು ಭಾವಿಸಿ ಪರಸ್ಪರ ಸಹಕಾರದಿಂದ ಸ್ವರಾಜ್ಯವನ್ನು ಸಾಕಾರಗೊಳಿಸಬಹುದಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

## 8.ತ್ಯಾಜ್ಯವಸ್ತು ನಿರ್ವಹಣೆ

ಪೀಠಿಕೆ : ಕಸದ ಸಂಗ್ರಹಣೆ, ಸಾಗಣೆ, ಸಂಸ್ಕರಣೆ, ಪುನರ್ಬಳಕೆ ಅಥವಾ ವಿಲೇವಾರಿಯನ್ನು 'ತ್ಯಾಜ್ಯವಸ್ತುಗಳ ನಿರ್ವಹಣೆ' ಎನ್ನುತ್ತೇವೆ.

ವಿಷಯ ನಿರೂಪಣೆ : ಮಾನವನು ತನ್ನ ದೈನಂದಿನ ಚಟುವಟಿಕೆಗಳಲ್ಲಿ ಬಳಸಿ ಬೀಸಾಡುವ ನಿರುಪಯುಕ್ತ ವಸ್ತುಗಳೇ ತ್ಯಾಜ್ಯವಸ್ತುಗಳು. ಇವುಗಳನ್ನು ಘನ ತ್ಯಾಜ್ಯವಸ್ತುಗಳು, ದ್ರವ ತ್ಯಾಜ್ಯವಸ್ತುಗಳು, ಅನಿಲ ತ್ಯಾಜ್ಯವಸ್ತುಗಳು, ಕೈಗಾರಿಕಾ ತ್ಯಾಜ್ಯವಸ್ತುಗಳು ಎಂದು ವಿಂಗಡಿಸಬಹುದು. ಇವುಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದಿದ್ದರೆ ಪರಿಸರ ನಾಶವಾಗುತ್ತದೆ.

ಉಪಸಂಹಾರ : ಆಧುನಿಕ ರೀತಿಯಲ್ಲಿ ತ್ಯಾಜ್ಯವಸ್ತುಗಳನ್ನು ವಿಲೇವಾರಿ ಮಾಡವ ಬಗ್ಗೆ ಜನರಿಗೆ ಅರಿವನ್ನು ಉಂಟುಮಾಡುವ ಕಾರ್ಯಕ್ರಮವನ್ನು ಏರ್ಪಡಿಸಬೇಕು. ತ್ಯಾಜ್ಯವಸ್ತುಗಳ ನಿರ್ವಹಣೆ ಮಾಡುವ ಕಾರ್ಯದಲ್ಲಿ ವಿದ್ಯಾರ್ಥಿಗಳು ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಇದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

## 9. ಮಹಿಳಾ ಸಬಲೀಕರಣ

ಪೀಠಿಕೆ : ಎಲ್ಲಿ ನಾರಿಯರನ್ನು ಪೂಜ್ಯನೀಯ ದೃಷ್ಟಿಯಿಂದ, ಗೌರವದಿಂದ ನೋಡುವರೋ ಅಲ್ಲಿ ಭಗವಂತನು ವಾಸಿಸುವನು. ಇಂದು ಮಹಿಳೆಯರು ಪುರುಷರಿಗೆ ಸರಿಸಮಾನರಾಗಿ ಸಾಧನೆಯನ್ನು ಮಾಡುವ ಸಾಮರ್ಥ್ಯವನ್ನು ಹೊಂದಿದ್ದಾರೆ.

ವಿಷಯನಿರೂಪಣೆ : ಸರ್ಕಾರವು ಮಹಿಳೆಯರನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಸ್ತ್ರೀಶಕ್ತಿ ಯೋಜನೆಗಳನ್ನು ಜಾರಿಗೊಳಿಸಿ ಸ್ವಸಹಾಯ ಸಂಘಗಳನ್ನು ಅಂಗನವಾಡಿ ಕಾರ್ಯಕರ್ತೆಯರ ಸಹಯೋಗದೊಂದಿಗೆ ರಚಿಸಲಾಗಿದೆ.

ಸಮಗ್ರ ಶಿಶು ಅಭಿವೃದ್ಧಿ ಸೇವೆಯನ್ನು ಅಂಗನವಾಡಿಗಳ ಮುಖಾಂತರ ಅನುಷ್ಠಾನಗೊಳಿಸಿ ಗರ್ಭಿಣಿ ಹಾಗೂ ಬಾಣಂತಿಯರಿಗೆ ಪೌಷ್ಠಿಕ ಅಹಾರವನ್ನು ವಿತರಣೆ ಮಾಡಲಾಗುತ್ತಿದೆ. ಉದ್ಯೋಗ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ವಿಶೇಷ ಸ್ಥಾನಮಾನ ನೀಡಿ ಮಹಿಳೆಯರ ಸಬಲೀಕರಣಕ್ಕೆ ಒತ್ತು ನೀಡಲಾಗಿದೆ.

ಉಪಸಂಹಾರ : "ತೊಟ್ಟಿಲನ್ನು ತೂಗುವ ಕೈ ಜಗತ್ತನೇ ಆಳಬಲ್ಲದು" ಎಂಬ ಮಾತಿನಂತೆ ಮಹಿಳಾ ಸಬಲೀಕರಣವಾದರೆ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ. ಅದ್ದರಿಂದ ಈ ನಿಟ್ಟಿನಲ್ಲಿ ನಾವೆಲ್ಲರೂ ಕಾರ್ಯಪ್ರವೃತ್ತರಾಗಬೇಕಾಗಿದೆ.

## 10.ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ವ

ಪೀಠಿಕೆ : ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಿ ಅವರನ್ನು ಸದೃಢರನ್ನಾಗಿ ಮಾಡುವುದರ ಮೂಲಕ ಉತ್ತಮ ಪ್ರಜೆಗಳಾಗಿ ರೂಪಿಸುವುದು ಸಮಾಜ ಹಾಗೂ ಸರ್ಕಾರದ ಆದ್ಯಕರ್ತವ್ಯವಾಗಿದೆ

ವಿಷಯ ನಿರೂಪಣೆ : ಅಕ್ಷರ ದಾಸೋಹ ಯೋಜನೆಯು ಶಾಲಾ ಮಕ್ಕಳ ಅಪೌಷ್ಠಿಕತೆಯನ್ನು ನಿವಾರಣೆ ಮಾಡಿ ಆ ಮೂಲಕ ಅವರ ಭೌತಿಕ ಮತ್ತು ಮಾನಸಿಕ ಬೆಳವಣಿಗೆಯನ್ನು ಸದೃಢಗೊಳಿಸುವ ನಿಟ್ಟಿನಲ್ಲಿ ಸಹಕಾರಿಯಾಗಿದೆ. ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 1 ರಿಂದ 10 ನೇ ತರಗತಿಯ ವಿದ್ಯಾರ್ಥಿಗಳೆಲ್ಲರಿಗೂ ಮಧ್ಯಾಹ್ನದ ಬಿಸಿಯೂಟವನ್ನು ನೀಡಲಾಗುತ್ತಿದೆ.

ಕ್ಷೀರ ಭಾಗ್ಯ ಯೋಜನೆ : ಶಾಲಾ ಮಕ್ಕಳ ಪೌಷ್ಠಿಕತೆಯನ್ನು ಹೆಚ್ಚಿಸುವ ಸದುದ್ದೇಶದಿಂದ ಕ್ಷೀರ ಭಾಗ್ಯ ಯೋಜನೆಯನ್ನು ಜಾರಿಗೆ ತಂದಿದೆ.

ಉಪಸಂಹಾರ :ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯ ಯೋಜನೆಗಳು ಕೆಲವು ಕಡೆ ಇನ್ನೂ ಪರಿಣಾಮಕಾರಿಯಾಗಿ ಅನುಷ್ಠಾನವಾಗಿಲ್ಲ ಹಾಗೂ ಈ ಯೋಜನೆಯನ್ನು ಕೆಲವರು ದುರುಪಯೋಗ ಮಾಡಿಕೊಳ್ಳುತ್ತಿರುವ ಪ್ರಸಂಗಗಳು ಪ್ರತಿನಿತ್ಯ ಕಂಡು ಬರುತ್ತಿದೆ. ಆದರೆ ಈ ಎಲ್ಲಾ ಲೋಪದೋಷಗಳ ನಡುವೆಯೂ ಈ ಯೋಜನೆಗಳು ಸಮಾಜದ ಎಲ್ಲಾ ಮಕ್ಕಳಿಗೆ ಸಹಕಾರಿಯಾಗಿವೆ ಎಂಬುದು ನನ್ನ ಅಭಿಪ್ರಾಯವಾಗಿದೆ.

# ಶುಭವಾಗಲಿ